ಸಂಪುಟ 01 | ಸಂಚಿಕೆ 172 | ಶನಿವಾರ 16 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಡೆಂಗ್ಯೂ ದಿನ**

ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಶಿಫಾರಸಿನ ಮೇರೆಗೆ ಈ ದಿನವನ್ನು (ಮೇ 16) ಆಚರಿಸಲಾಗುತ್ತದೆ. ದೇಶಾದ್ಯಂತ ಡೆಂಗ್ಯೂ ವ್ಯಾಪಕವಾಗಿ ಹರಡಿದೆ. ಈ ವರ್ಷ ಅಔಗಿಖಆ–19 ಸಾಂಕ್ರಾಮಿಕ ಲಾಕ್‌ಡೌನ್‌ನಿಂದಾಗಿ, ಡೆಂಗ್ಯೂ ಬಗ್ಗೆ ಜಾಗೃತಿ ಅಭಿಯಾನಗಳು, ರ್ಯಾಲಿಗಳು ಇತ್ಯಾದಿಗಳನ್ನು ದೇಶದಲ್ಲಿ ಆಯೋಜಿಸಲಾಗಿಲ್ಲ ಆದರೆ ಆನ್‌ಲೈನ್ ಮೂಲಕ ಹರಡಬಹುದು.

**2) ಅಂತರರಾಷ್ಟ್ರೀಯ ಬೆಳಕಿನ ದಿನ**

ಪ್ರತಿ ವರ್ಷ ಮೇ 16 ರಂದು, ಪ್ರಪಂಚದಾದ್ಯಂತ ಜನರು ಅಂತರರಾಷ್ಟ್ರೀಯ ಬೆಳಕಿನ ದಿನವನ್ನು ಆಚರಿಸುತ್ತಾರೆ. ಈ ದಿನವು 1960 ರಲ್ಲಿ ಭೌತಶಾಸ್ತ್ರಜ್ಞ ಮತ್ತು ಎಂಜಿನಿಯರ್ ಥಿಯೋಡರ್ ಮೈಮನ್ ಅವರ ಮೊದಲ ಉತ್ಪಾದಕ ಲೇಸರ್ ಕಾರ್ಯಾಚರಣೆಯ ದಿನಾಂಕವನ್ನು ಗೌರವಿಸುತ್ತದೆ. ವಿಶ್ವಸಂಸ್ಥೆಯ ಪರವಾಗಿ ಯುನೆಸ್ಕೋದ ಅಂತರರಾಷ್ಟ್ರೀಯ ಮೂಲ ವಿಜ್ಞಾನ ಕಾರ್ಯಕ್ರಮ (I.B.S.P.) ಈ ದಿನದ ಆಚರಣೆಯನ್ನು ಸಂಘಟಿಸುತ್ತದೆ.

**3) ಸಶಸ್ತ್ರ ಪಡೆಗಳ ದಿನ**

ಸಶಸ್ತ್ರ ಪಡೆಗಳ ದಿನ (ಮೇ ತಿಂಗಳ ಮೂರನೇ ಶನಿವಾರ) ಪ್ರತಿ ಮೇ ತಿಂಗಳ ಮೂರನೇ ಶನಿವಾರ ಸಶಸ್ತ್ರ ಪಡೆಗಳ ದಿನವನ್ನು ಆಚರಿಸಲಾಗುತ್ತದೆ. ಯುನೈಟೆಡ್ ಸ್ಟೇಟ್ಸ್ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಿದ ಪುರುಷರು ಮತ್ತು ಮಹಿಳೆಯರಿಗೆ ಗೌರವ ಸಲ್ಲಿಸಲು ಈ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ನಿಮಗೆ ಮನಃಶಾಂತಿ ಬೇಕಾಗಿದ್ದರೆ, ಇತರರಲ್ಲಿ ತಪ್ಪು ಹುಡುಕುವುದನ್ನು ಬಿಡಿ. ನಿಮ್ಮಲ್ಲಿರುವ ತಪ್ಪು ಕಂಡುಕೊಳ್ಳುವುದನ್ನು ಕಲಿಯಿರಿ.

–ಶಾರದಾ ದೇವಿ

# ಯುಎಇಯಲ್ಲಿ ಪ್ರಧಾನಿ ಮೋದಿ

## ಇಂಧನ ಪೂರೈಕೆ ಸೇರಿದಂತೆ ಮಹತ್ವದ ಒಪ್ಪಂದಗಳಿಗೆ ಸಹಿ

**ನವದೆಹಲಿ:** ಸದ್ಯದ ಭೌಗೋಳಿಕ ರಾಜಕೀಯ ಕ್ರಾಂತಿಯ ನಡುವೆ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಇಂದಿನಿಂದ ಯುನೈ ಟೆಡ್ ಅರಬ್ ಎಮಿರೇಟ್ಸ್ (ಯು–ಎಇ), ನೆದರ್ಲ್ಯಾಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿಗೆ ಆರು ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಇಂಧನ ಹರಿವನ್ನು ರಕ್ಷಿಸುವುದು, ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ವ್ಯಾಪಾರ ಅಡೆತಡೆಗಳನ್ನು ತಗ್ಗಿಸುವುದು ಮತ್ತು ನಿರ್ಣಾಯಕ ತಂತ್ರಜ್ಞಾನಗಳಲ್ಲಿ ಸಹಕಾರವನ್ನು ಹೆಚ್ಚಿಸುವುದು ಈ ಪ್ರವಾಸದ ಪ್ರಮುಖ ಗಮನವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಮುಂದಿನ ಆರು ದಿನಗಳಲ್ಲಿ, ಭಾರತದ ಜಾಗತಿಕ ಪಾಲುದಾರಿಕೆಗಳನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ವ್ಯಾಪಕ ಶ್ರೇಣಿಯ ಕಾರ್ಯಸೂಚಿಯಲ್ಲಿ ಪ್ರಧಾನಿ ಹಲವಾರು ವಿಶ್ವ ನಾಯಕರೊಂದಿಗೆ ತೊಡಗಿಸಿಕೊಳ್ಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್



ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಅವರ ಮೊದಲ ತಾಣ ಯುಎಇ ಆಗಿದ್ದು, ಅಲ್ಲಿ ಅವರು ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಭಾರತ–ಯುಎಇ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮುನ್ನಡೆಸುವ ಮತ್ತು ಪಶ್ಚಿಮ ಏಷ್ಯಾ ಸಂಘರ್ಷದ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವತ್ತ ಗಮನಹರಿಸಲಿದ್ದಾರೆ. ಪ್ರಧಾನಿ ಅವರು ಯುರೋಪ್ ಪ್ರವಾಸ ಕೈಗೊಳ್ಳುವ ಮೊದಲು ಸುಮಾರು ನಾಲ್ಕು ಗಂಟೆಗಳ ಕಾಲ ಗಲ್?ಫ ರಾಷ್ಟ್ರದಲ್ಲಿ ಇರುತ್ತಾರೆ.ಮೋದಿ–ಅಲ್ ನಹ್ಯಾನ್ ಮಾತುಕತೆಗಳ ನಂತರ, ಭಾರತ ಮತ್ತು ಯುಎಇ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮತ್ತು ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪಗಳ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸಲು ಎರಡು ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳುವ ನಿರೀಕ್ಷೆಯಿದೆ.

ಟೆಹ್ರಾನ್‌ನ ಹಾರ್ಮುಜ್ ಜಲಸಂಧಿಯ ದಿಗ್ಬಂಧನದಿಂದಾಗಿ ಅಮೆ–ರಿಕ ಮತ್ತು ಇರಾನ್ ನಡುವಿನ ಹೆಚ್ಚುತ್ತಿರುವ ಸಂಘರ್ಷವು ಜಾಗತಿಕ ಇಂಧನ ಮಾರುಕಟ್ಟೆಗಳನ್ನು ತೀವ್ರವಾಗಿ ಅಸ್ಥಿರಗೊಳಿಸಿದೆ ಇದು ವಿಶ್ವದ ಒಟ್ಟು ಪೆಟ್ರೋಲಿಯಂ ಪೂರೈಕೆಯ ಸರಿಸುಮಾರು ಶೇಕಡಾ 20 ರಷ್ಟು ಹರಿಯುವ ಪ್ರಮುಖ ಸಾರಿಗೆ ಚಾಕ್‌ಪಾಯಿಂಟ್ ಆಗಿದೆ. ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಅಲ್ ನಹ್ಯಾನ್ ಅವರು ದ್ವಿಪಕ್ಷೀಯ ವ್ಯಾಪಾರ ಮತ್ತು ಹೂಡಿಕೆ ಸಂಬಂಧಗಳನ್ನು ಹೆಚ್ಚಿಸುವ ಬಗ್ಗೆಯೂ ಚರ್ಚಿಸುವ ನಿರೀಕ್ಷೆಯಿದೆ.ಯುಎಇ ಭಾರತದ ಮೂರನೇ ಅತಿದೊಡ್ಡ ವ್ಯಾಪಾರ ಪಾಲುದಾರ ಮತ್ತು ಕಳೆದ 25 ವರ್ಷಗಳಲ್ಲಿ

4ನೇ ಪುಟಕ್ಕೆ

## ಸಿರುಗುಪ್ಪ :ತಾಲೂಕಿನ ನಿಟ್ಟೂರು ತೆಕ್ಕಲಕೋಟೆ ಬಂಡೆಗಲ್ಲು ಶಾಸನ ಪತ್ತೆ ಪುರಾತತ್ವ ಇಲಾಖೆ ಅಧಿಕಾರಿಗಳ ಭೇಟಿ



ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ: ತಾಲೂಕಿನ ನಿಟ್ಟೂರು ಹಾಗೂ ತೆಕ್ಕಲಕೋಟೆ ಪಟ್ಟಣದ ಗೌಡ್ರ ಮೂಲೆ ಪ್ರದೇಶಗಳಲ್ಲಿ ದೊರೆತ ಬಂಡೆಗಲ್ಲು ಶಾಸನ ಸ್ಥಳಕ್ಕೆ ಪುರಾತತ್ವ ಇಲಾಖೆ ಅಧಿಕಾರಿಗಳ ಭೇಟಿ ನೀಡಿ ಪರಿಶೀಲನೆ ನಡೆಸಿದರು ಹಂಪಿ ಕಮಲಾಪುರದ ರಾಜ್ಯ ಪುರಾತತ್ವ ಇಲಾಖೆಯ ಜಿಲ್ಲಾ ಪುರಾತತ್ವ ಸರ್ವೇಕ್ಷಣಾಧಿಕಾರಿ ಶೇಜೇಶ್ವರ ಆರ್ ನಾಯಕ ಈ ಸಂದರ್ಭದಲ್ಲಿ ಮಾತನಾಡಿ ಸಾಮಾಜಿಕ ಜಾಲತಾಣಗಳಲ್ಲಿ ಬಂಡೆಗಲ್ಲು ಶಾಸನದ ವರದಿ ಬಂದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಲಾಗಿದೆ ಎಂದರು.

ನಿಟ್ಟೂರಿನ ಅಶೋಕನ ಶಿಲಾ ಶಾಸನದ ಸುಕ್ರದಪ್ಪನ ಬೆಟ್ಟ ಬಳಿಯೇ ರಾಷ್ಟ್ರಕೂಟ–ರ ಒಂದನೇ ಕೃಷ್ಣನ ಕಾಲದ ಈ ಮಹತ್ವದ ದಾಖಲೆ ದೊರೆತಿದೆ ಅಲ್ಲದೆ ತೆಕ್ಕಲ ಕೋಟೆಯಲ್ಲಿ ಈಚೆಗೆ ನಡೆದ ಉತ್ಖನನ ಸ್ಥಳದ ಬಳಿಯ ಗೌಡ್ರ ಮೂಲೆಯಲ್ಲಿ ಮತ್ತೊಂದು ಬಂಡೆಗಲ್ಲು ಶಾಸನ ದೊರೆತಿರುವುದು ಇದು ವಿಜಯನಗರ ಅಥವಾ ಪೂರ್ವದ ವಿಜಯನಗರ ಕಾಲದ ಕೆರೆ ನಿರ್ಮಾಣದ ಶಾಸನ ಎಂದು ತಿಳಿದು ಬಂದಿದೆ ಎಂದು ಸ್ಪಷ್ಟಪಡಿಸಿದರು ಬಂಡೆಗಲ್ಲು ಶಾಸನಗಳ ನೆರಳಿಗೆ ಚಾವಣಿ ನಾಮಫಲಕ ಸಂರಕ್ಷಣಾ ಕಟ್ಟೆ ಹಾಗೂ ಮಾಹಿತಿ ಫಲಕಗಳನ್ನು ಹಾಕಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು ಪುರಾತತ್ವ ಸಂರಕ್ಷಣೆ ಇಂಜಿನಿಯರ್ ಜೆ ಸತೀಶ್ ಇತಿಹಾಸ ಸಂಶೋಧನಾರ್ಥಿ ಸಿಎಂ ಮನೋಹರ ಸಾಮಾಜಿ–ಕ ಕಾರ್ಯಕರ್ತ ಅಬ್ದುಲ್ ನಬಿ ಪುರಾತತ್ವ ಇಲಾಖೆಯ ಸಿಬ್ಬಂದಿ ವರ್ಗದವರು ಇದ್ದರು.

ವರದಿ :ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

## ಡಿ.ಕೆ. ಶಿವಕುಮಾರ್ ಕಾರ್ಯಕ್ರಮದ ದೊಡ್ಡ ಅವಘಡ ತಪ್ಪಿಸಿದ ಮಾನ್ವಿ ಅಗ್ನಿಶಾಮಕ ಸಿಬ್ಬಂದಿಯ ಸೇವೆಗೆ ಎಸ್‌ಪಿ ಮೆಚ್ಚುಗೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ:** ಪಟ್ಟಣದ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಗಳು ಜಿಲ್ಲೆಯ ಸಿಂಧನೂರು ನಗರದಲ್ಲಿ ಮೇ 3ರಂದು ವಿಧಾನಪರಿಷತ್ ಸದಸ್ಯ ಬಸವನಗೌಡ ಬಾದರ್ಲಿ ನೇತೃತ್ವದಲ್ಲಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಉಪಸ್ಥಿತಿಯಲ್ಲಿ ನಡೆದ ಸಾಮೂಹಿಕ ವಿವಾಹ ಹಾಗೂ ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮದ ವೇದಿಕೆ ಸ್ಥಳದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾದ ಅಗ್ನಿ ಅವಘಡವನ್ನು ಕೆಲವೇ ಕ್ಷಣಗಳಲ್ಲಿ ನಿಯಂತ್ರಿಸಿ ಬೆಂಕಿಯನ್ನು ನಂದಿಸುವ ಮೂಲಕ ಸಾರ್ವಜನಿಕರು ಹಾಗೂ ಗಣ್ಯ–ರಿಗೆ ಯಾವುದೇ ಹಾನಿಯಾಗದಂತೆ ಉತ್ತಮ ಕರ್ತವ್ಯ ನಿರ್ವಹಿಸಿದರು.

ಈ ಶ್ಲಾಘನೀಯ ಕಾರ್ಯಕ್ಕಾಗಿ ರಾಯಚೂರಿನಲ್ಲಿ ಜಿಲ್ಲಾ ಪೊಲೀಸ್



ಇಲಾಖೆಯಿಂದ ನಡೆದ ಕಾರ್ಯಕ್ರಮದಲ್ಲಿ ಮಾನ್ವಿ ಅಗ್ನಿಶಾಮಕ ಠಾಣೆಯ ಸಹಾಯಕ ಅಗ್ನಿ ಸುರಕ್ಷತಾ ಅಧಿಕಾರಿ ಖಾಜಹುಸೇನ್ ಹಾಗೂ ಸಿಬ್ಬಂದಿಗಳಾದ ತಿರುಪತಿ, ರಾಜಸಾಬ್, ಮಂಜುನಾಥ, ನಾಗರಾಜ, ಅಮರಯ್ಯ ಮತ್ತು ಸಚೀನ್ ಅವರನ್ನು ಜಿಲ್ಲಾ ಪೊಲೀಸ್ ಅಧೀಕ್ಷಕ ಅರುಣಾಂಗ್ಶು ಗಿರಿ ಸನ್ಮಾನಿಸಿ ಗೌರವಿಸಿದರು. ಈ ವೇಳೆ ಮಾತನಾಡಿದ ಜಿಲ್ಲಾ ಪೊಲೀಸ್ ಅಧೀಕ್ಷಕರು, ಅಗ್ನಿಶಾಮಕ ಸಿಬ್ಬಂದಿಗಳ ಸಮಯಪ್ರಜ್ಞೆ ಮತ್ತು ಕರ್ತವ್ಯನಿಷ್ಠೆ ಇತರರಿಗೆ ಸ್ಫೂರ್ತಿಯಾಗಲಿ ಎಂದು ಹಾರೈಸಿದರು.

## ಉಡುಪಿನ ಕಾರಣಕ್ಕೆ ಶಿಕ್ಷಣ ವಂಚನೆ ಬೇಡ: ಸರ್ಕಾರದ ನಿರ್ಧಾರಕ್ಕೆ ಮೆಚ್ಚುಗೆ :SIO ಕಾರ್ಯದರ್ಶಿ ಮೊಹಮ್ಮದ್ ಹಯ್ಯಾನ್

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಇತ್ತೀಚೆಗೆ ಸರ್ಕಾರ ಹಿಜಾಬ್ ಮೇಲಿನ ನಿರ್ಬಂಧವನ್ನು ಹಿಂತೆಗೆದುಕೊಂಡಿರುವ ನಿರ್ಧಾರವು ಅತ್ಯಂತ ಸ್ವಾಗತಾರ್ಹವಾದ ಹೆಜ್ಜೆಯಾಗಿದ್ದು, ಇದು ಸಂವಿಧಾನಾತ್ಮಕ ಮೌಲ್ಯ ಹಾಗೂ ನೈಜ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುತ್ತದೆ.**

ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣ ಹಕ್ಕುಗಳನ್ನು ಮರುಸ್ಥಾಪಿಸುವ ಮೂಲಕ, ಆಡಳಿತ ವರ್ಗವು ಸಮಾನತೆಯ ಮೇಲಿನ ತನ್ನ ದೃಢ ಬದ್ಧತೆಯನ್ನು ತೋರಿಸಿದೆ. ಯಾವುದೇ ವಿದ್ಯಾರ್ಥಿನಿ ತನ್ನ ಉಡುಪಿನ ಕಾರಣದಿಂದ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಸಂದೇಶವನ್ನು ಇದು ಸ್ಪಷ್ಟವಾಗಿ ನೀಡುತ್ತದೆ. ಯಾವುದೇ ಧರ್ಮಭೇದವಿಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನನ್ನು ಈ ವ್ಯವಸ್ಥೆಯ ಭಾಗವೆಂದು ಭಾವಿಸುವಂತೆ ಸಮಾನತೆಯ ಮತ್ತು ಒಳಗೊಳ್ಳುವಿಕೆಯ



BR. MOHAMMAD HAYYAN

ವಾತಾವರಣವನ್ನು ನಿರ್ಮಿಸುವ ನಿಟ್ಟಿನಲ್ಲಿಸರ್ಕಾರ ಕೈಗೊಂಡಿರುವ ಕ್ರಮವನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ.

ವಿದ್ಯಾರ್ಥಿನಿಯರ ಶಿಕ್ಷಣವನ್ನು ಮೊಟಕುಗೊಳಿಸುವ ಈ ಸಮಸ್ಯೆಯನ್ನು ನ್ಯಾಯಪರವಾದ ತೀರ್ಪಿನೊಂದಿಗೆ ಪರಿಹ–ರಿಸಿರುವ ಕ್ರಮವನ್ನು ಸ್ವಾಗತಿಸುವುದರೊಂದಿಗೆ , ಇದರ ಜಾರಿಯಲ್ಲಿ ಆಗಿರುವ ವಿಳಂಬವನ್ನು ಮತ್ತೊಮ್ಮೆ ನೆನಪಿಸಬೇಕಾಗಿದೆ. ಭವಿಷ್ಯದಲ್ಲಿ ವಿದ್ಯಾರ್ಥಿನಿಯರ ಅಮೂಲ್ಯವಾದ ಶೈಕ್ಷಣಿಕ ವರ್ಷಗಳು ಹಾನಿಯಾಗದಂತೆ ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂಬ ನಿರೀಕ್ಷೆಯಿದೆ. ಹಿಂದಿನ ಬಿಜೆಪಿ ಆಡಳಿತದ ವಿಭಜನಾ ಮತ್ತು ದ್ವೇಷಪೂರಿತ ರಾಜಕಾರಣವು ತರಗತಿ ಕೊಠಡಿಗಳನ್ನೇ ರಾಜಕೀಯದ ವೇದಿಕೆಯನ್ನಾಗಿ ಮಾಡಿದ್ದು, ಶಿಕ್ಷಣ ಪಡೆದ ಮುಸ್ಲಿಂ ಮಹಿಳೆಯರ ಗೌರವವನ್ನು ಹಾನಿಗೊಳಿಸಿ ಅವರನ್ನು ಶಾಲೆಗಳಿಂದ ಹೊರಗುಳಿಸುವ ಹುನ್ನಾರವನ್ನು ಸಹಿಸಲು ಸಾಧ್ಯವಿಲ್ಲ.

ಆ ವಿಭಜನಾ ನೀತಿಯನ್ನು ದೃಢವಾಗಿ ಹಿಂತೆಗೆದುಕೊಳ್ಳುವ ಮೂಲಕ, ಪ್ರಸ್ತುತ ಸರ್ಕಾರವು ಸಾಮುದಾಯಿಕ ಸೌಹಾರ್ದತೆಯೆಡೆಗೆ ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಹೆಣ್ಣುಮಕ್ಕಳ ಶಿಕ್ಷಣವು ಯಾವಾಗಲೂ ದ್ವೇಷದ ರಾಜ–ಕಾರಣ ಮತ್ತು ಉಡುಪಿನ ವಿವಾದಗಳಿಗಿಂತ ಉನ್ನತವಾಗಿರಬೇಕು ಎಂಬುದನ್ನು ಇದು ಸ್ಪಷ್ಟವಾಗಿ ಸಾಬೀತುಪಡಿಸಿದೆ.

## ಪ್ರವೇಶಾತಿ ನೂರರ ಗಡಿ ದಾಟಿದ ಜೂನಿಯರ್ ಕಾಲೇಜು ಸಿಂಧನೂರು : ಸೆಂಚುರಿ ಬಟ್ ನಾಟ್ ಔಟ್

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸರಕಾರಿ ಕಾಲೇಜುಗಳೆಂದರೆ ಮೂಗು ಮುರಿಯುವ ಇಂದಿನ ಕಾಲದಲ್ಲಿ ಸಿಂಧನೂರು ನಗರದ ಪಿಡಬ್ಲ್ಯುಡಿ ಕ್ಯಾಂಪಿನ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಪ್ರಸಕ್ತ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಸಂಖ್ಯೆ ಸೆಂಚುರಿ ದಾಟಿದ್ದು, ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆಯುತ್ತಿರುವುದು ಗಮನಾರ್ಹವಾಗಿದೆ.**

ಇಂದಿನ ಕಾಲದಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣಕ್ಕಾಗಿ ದುಡ್ಡು ಕೊಟ್ಟು ದೊಡ್ಡ ದೊಡ್ಡ ಖಾಸಗಿ ಕಾಲೇಜುಗಳಿಗೆ ಪ್ರವೇಶಾತಿಗಾಗಿ ಅಲೆದಾಡುತ್ತಿದ್ದಾರೆ ಅಂತಹ ಸಂಧರ್ಭದಲ್ಲಿ ಗುಣಮಟ್ಟದ ಶಿಕ್ಷಣ, ಅನುಭವೀ ಉಪನ್ಯಾಸಕರು ಹಾಗೂ ಕಡಿಮೆ ಶುಲ್ಕದ ವ್ಯವಸ್ಥೆಯಿಂದ ಈ ಕಾಲೇಜು ವಿದ್ಯಾರ್ಥಿಗಳು ಹಾಗೂ ಪಾಲಕರ ಮೆಚ್ಚುಗೆಗೆ ಪಾತ್ರವಾಗಿದೆ.ಈ ಕಾಲೇಜಿನಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳು ಕಾರ್ಯನಿರ್ವಹಿಸುತ್ತಿದ್ದು, ವಿಶೇಷವಾಗಿ ವಿಜ್ಞಾನ ವಿಭಾಗವು ಉತ್ತಮ ಫಲಿತಾಂಶಗಳ ಮೂಲಕ ಜಿಲ್ಲೆಯ ಮಟ್ಟದಲ್ಲಿ ತನ್ನದೇ ಆದ ಹೆಸರು ಗಳಿಸಿದೆ. ಕಳೆದ 2025–26ನೇ ಸಾಲಿನಲ್ಲಿ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆದಿದ್ದ 134 ವಿದ್ಯಾರ್ಥಿಗಳಲ್ಲಿ 16 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದು, ಉಳಿದ ಅನೇಕ ವಿದ್ಯಾರ್ಥಿಗಳು ಪ್ರಥಮ, ದ್ವಿತೀಯ ಹಾಗೂ ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಒಟ್ಟಾರೆ ವಿಜ್ಞಾನ ವಿಭಾಗವು ಶೇ.90ರಷ್ಟು ಫಲಿತಾಂಶ ದಾಖಲಿಸಿದ್ದು, ಕಾಲೇಜಿನ ಶೈಕ್ಷಣಿಕ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ.ವಿಜ್ಞಾನ ವಿಭಾಗದಲ್ಲಿ ವಿದ್ಯಾರ್ಥಿಗಳಿಗೆ ಎರಡು ಪ್ರಮುಖ ಸಂಯೋಜನೆಗಳಾದ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಹಾಗೂ ಜೀವಶಾಸ್ತ್ರ (ಪಿಸಿಎಂಬಿ) ಮತ್ತು ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಹಾಗೂ ಕಂಪ್ಯೂಟರ್ ವಿಜ್ಞಾನ (ಪಿಸಿಎಂಸಿ–ಎಸ್) ಅಭ್ಯಾಸ ಮಾಡುವ ಅವಕಾಶ ಕಲ್ಪಿಸಲಾಗಿದೆ. ಮುಂದಿನ ದಿನಗಳಲ್ಲಿ ವೈದ್ಯಕೀಯ, ಇಂಜಿನಿಯರಿಂಗ್,



ತಾಂತ್ರಿಕ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಈ ಕೋರ್ಸ್‌ಗಳು ಸಹಾಯಕವಾಗಿವೆ. ಕಾಲೇಜಿನಲ್ಲಿ ಅತ್ಯಂತ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿರುವುದು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಬಹಳಷ್ಟು ಅನುಕೂಲಕರವಾಗಿದೆ.

ಸಾಮಾನ್ಯ ವಿದ್ಯಾರ್ಥಿಗಳಿಗೆ ರೂ.2700, ವಿದ್ಯಾರ್ಥಿನಿಯರಿಗೆ ರೂ.1000, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ರೂ.1000 ಮತ್ತು

**ನಮ್ಮ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಅನುಭವಸಂಪನ್ನ ಹಾಗೂ ಉತ್ಸಾಹಿ ಉಪನ್ಯಾಸಕರ ಬಳಗ ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ವಿಶೇಷ ಗಮನ ಹರಿಸಲಾಗುತ್ತಿದೆ. ಸುಸಜ್ಜಿತ ಪ್ರಯೋಗಾಲಯ, ಗ್ರಂಥಾಲಯ ಸೇರಿದಂತೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಗ್ರಾಮೀಣ ಹಾಗೂ ನಗರ ಭಾಗದ ವಿದ್ಯಾರ್ಥಿಗಳಲ್ಲಿಯೂ ಆತ್ಮವಿಶ್ವಾಸ ಬೆಳೆಸುವ ಉದ್ದೇಶದಿಂದ ವಿಶೇಷ ತರಗತಿಗಳು, CET/NEET ಮಾರ್ಗದರ್ಶನ, ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಶೈಕ್ಷಣಿಕ ವಾತಾವರಣ ನಿರ್ಮಿಸಿರುವ ಪರಿಣಾಮ ಪ್ರತಿವರ್ಷವೂ ಉತ್ತಮ ಫಲಿತಾಂಶಗಳು ದೊರೆಯುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣದತ್ತ ಮುಂದಾಗುತ್ತಿದ್ದಾರೆ ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ ಹಾಗಾಗಿ ವಿಜ್ಞಾನ ವಿಭಾಗದಲ್ಲಿ ಪ್ರವೇಶಾತಿಗಳು ನೂರರ ಗಡಿ ದಾಟಿವೆ.**



ಪ್ರಾಚಾರ್ಯ ಶೇಖರಯ್ಯ ಸ್ವಾಮಿ

ಸಿ1, 2ಎ, 2ಬಿ, 3ಎ, 3ಬಿ ಹಾಗೂ ಐ.ಸಿ. ವರ್ಗದ ವಿದ್ಯಾರ್ಥಿಗಳಿಗೆ ರೂ.1770 ಶುಲ್ಕ ನಿಗದಿಪಡಿಸಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದಾರೆ. ಕಾಲೇಜಿನ ಉತ್ತಮ ಶೈಕ್ಷಣಿಕ ವಾತಾವರಣ, ಶಿಸ್ತಿನ ಶಿಕ್ಷಣ, ವಿದ್ಯಾರ್ಥಿ ಸ್ನೇಹಿ ಉಪನ್ಯಾಸಕರು ಹಾಗೂ ಕಡಿಮೆ ಶುಲ್ಕದ ವ್ಯವಸ್ಥೆ ಕಾರಣದಿಂದ ಈ ಬಾರಿ ಪ್ರವೇಶಾತಿಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ ಎಂದು ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ. ಗ್ರಾಮೀಣ ಹಾಗೂ ಬಡ ಕುಟುಂಬದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಒದಗಿಸುವ ದಿಸೆಯಲ್ಲಿ ಕಾಲೇಜು ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಪಾಲಕರು ಸಂತಸ ವ್ಯಕ್ತಪಡಿಸಿದ್ದಾರೆ.

## ಸಾಹಿತ್ಯ ಸಿಂಚನ

ತಾಯಿ

ತಾಯಿ ಎಂದರೆ ಪ್ರೀತಿ ಸಾಗರ,
ತನ್ನ ನೋವನ್ನು ಮರೆಮಾಡುವ ತ್ಯಾಗದ ಅಗರ.
ನಗುವ ಹಿಂದೆ ಸಾವಿರ ಕಷ್ಟ,
ಮಕ್ಕಳಿಗಾಗಿ ಜೀವವನ್ನೇ ಅರ್ಪಿಸುವ ಶಕ್ತಿ.

ಮಾತಿನಲ್ಲೇ ಮಮತೆ ತುಂಬಿ,
ಕೈ ಹಿಡಿದು ಬದುಕು ಕಲಿಸಿ,
ಬಿದ್ದಾಗ ಎತ್ತಿ ನಿಲ್ಲಿಸುವಳು,
ತಾಯಿಯ ಹೃದಯವೇ ದೇವಾಲಯ.

ರಾತ್ರಿ ನಿದ್ದೆ ತ್ಯಜಿಸಿ ಕಾಯುವಳು,
ನಮ್ಮ ಕನಸುಗಳಿಗೆ ದಾರಿ ತೋರಿಸುವಳು,
ಲೋಕವೇ ದೂರವಾದರೂ ಸರಿ,
ತಾಯಿ ಮಾತ್ರ ಎಂದಿಗೂ ಹತ್ತಿರವೇ ಇರುವುದು.

ತಾಯಿಯ ಪ್ರೀತಿ ಅಳತೆಯಿಲ್ಲ,
ಅದು ದೇವರಿಗಿಂತ ಕಡಿಮೆಯಿಲ್ಲ,
ಜನ್ಮ ಕೊಟ್ಟು ಬದುಕು ಕೊಟ್ಟವಳು ?
ನನ್ನ ತಾಯಿ ನನ್ನ ಮೊದಲ ದೇವರು.

ಯಾಸೀನಾ ಇರ್ಫಾನ್ ಸಿಂಧನೂರು

## ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿನೀಯರಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ 2026ನೇ ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99.2 ಅಂಕಗಳನ್ನು ಪಡೆದಿರುವ ಚಾಂದ ಸುಲ್ತಾನಾ ಎಂ. ಮನಗೂಳಿ ಅವರನ್ನು ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ.94.16 ಅಂಕ ಗಳಿಸಿರುವ ಅವರ ಸಹೋದರಿ ಈರಂ ತಾಜ್ ಅವರನ್ನು ಶಿಕ್ಷಕ ಮಿತ್ರರು ಬುಧವಾರ ಸನ್ಮಾನಿಸಿದರು.**



ಶಿಕ್ಷಕ ದಂಪತಿ ಎಂ.ಎಫ್.ಅವಟಿ, ಸಿದ್ದಣ ನಾವಿ ಹಾಗೂ ಬ.ಸಾಲವಾಡಗಿ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಾದ ಐ.ಎಂ. ಚಿಮ್ಮಲಗಿ, ಶ್ರೀಕಾಂತ ಕೋಡೆಕಲ್ಲ, ಶಾಂತಗೌಡ ಪಾಟೀಲ್, ಗುಂಡಕನಾಳ ಶಾಲೆಯ ಮುಖ್ಯ ಗುರುಗಳಾದ ಸಜ್ಜನ ಸರ್, ಉದಯ ಬಳಗಾನೂರ , ಎಂ.ಎಂ.ಅವಟಿ, ಜರಿನಾ ಇನಾಂದಾರ್, ಸಚಿನ್ ಯರಗಲ್ಲ ಉಪಸ್ಥಿತರಿದ್ದರು.

## ಕರ್ನಾಟಕ ರಾಜ್ಯ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರ 65ನೇ ಜನ್ಮದಿನ ಸಂಭ್ರಮ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ಜೀವನದ ಸಮಸ್ಯೆಗಳಿಗೆ ನಮ್ಮ ಮಾತಿನ ಧ್ವನಿ ಧಾಟಿ ಕಾರಣ ಏನು ಹೇಳುತ್ತೇವೆ ಎಂಬುದಕ್ಕಿಂತ ಹೇಗೆ ಹೇಳುತ್ತೇವೆ ಎನ್ನುವುದು ಹೆಚ್ಚು ಮುಖ್ಯ ಎಂದು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸೆಂಟ್ರಲ್ ಕೌನ್ಸಿಲ್ ಮೈಸೂರು ಸಾಕ್ಷರತಾ ಸದಸ್ಯರು ಸಮಾಜ ಸುಧಾರಕ ಅಬ್ದುಲ್ ನಬಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.**



ಇಬ್ರಾಹಿಂ ಮಂಜಿಲ್ ನಲ್ಲಿ ಕರ್ನಾಟಕ ಸರ್ಕಾರದ ಉಪಮುಖ್ಯಮಂತ್ರಿ ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಡಿಕೆ ಶಿವಕುಮಾರ್ ಅವರ 65 ನೇ ಜನ್ಮದಿನವನ್ನು ನೆನಪಿಸಿ ಗೌರವಿಸಿ ಅವರ ಜನ್ಮದಿನದ ಶುಭಾಶಯಗಳು ಹಾರೈಸಿದರು ಡಿಕೆ ಶಿವಕುಮಾರ್ ಅವರ ಜನ್ಮದಿನದ ಪ್ರಯುಕ್ತ ವಿವಿಧ ಸಂಘ ಸಂಸ್ಥೆ ಕಾಂಗ್ರೆಸ್ ಕಾರ್ಯಕರ್ತರು ಅಭಿಮಾನಿ ಗಳಿಂದ ಬಡವರಿಗೆ ಕಿಟ್ ಗಳು ಪ್ರಸಾದ ಉಪಹಾರ ವಿತರಣೆ ಪಟಾಕಿ ಸಿಡಿಸಿ ಕೇಕ್ ಕಟ್ ಮಾಡುವ ಮೂಲಕ ಸಾರ್ವಜನಿಕರಿಗೆ ಅನ್ನದಾಸೋಹ ಊಟದ ವ್ಯವಸ್ಥೆ ಗೊಳಿಸಲಾಗಿತ್ತು. ವರದಿ: ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

# "ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾದ ಐವರ ಗಡಿಪಾರು"

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮಟ್ಕಾ, ಜೂಜಾಟ, ಸೇಂದಿ ಹಾಗೂ ಇತರೆ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದ ಐವರು ಆರೋಪಿಗಳನ್ನು ಗಡಿಪಾರು ಮಾಡಿ ಲಿಂಗಸುಗೂರು ಸಹಾಯಕ ಆಯುಕ್ತರು ಆದೇಶ ಹೊರಡಿಸಿದ್ದಾರೆ.**

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ ಅವರ ಶಿಫಾರಸ್ಸಿನ ಮೇರೆಗೆ ಕ್ರಮ ಕೈಗೊಳ್ಳಲಾಗಿದೆ. ಮಸ್ಕಿ ತಾಲ್ಲೂಕಿನ ಬಳಗಾನೂರು ಪೊಲೀಸ್ ಠಾಣೆ ವ್ಯಾಪ್ತಿಯ ನಂಜಲದಿನ್ನಿ ಗ್ರಾಮದ ವ್ಯಕ್ತಿಯ ವಿರುದ್ಧ ಒಸಿ, ಮಟ್ಕಾ ಸೇರಿದಂತೆ 14 ಪ್ರಕರಣಗಳು ದಾಖಲಾಗಿವೆ. ಆರೋಪಿಯನ್ನು ವಿಜಯಪುರ ಜಿಲ್ಲೆಯ ನಿಡಗುಂದಿ ಠಾಣೆ




ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ಮಸ್ಕಿ ತಾಲ್ಲೂಕಿನ ತುರ್ವಿಹಾಳ ಠಾಣೆ ವ್ಯಾಪ್ತಿಯ ಸಿಂಧನೂರು ತಾಲ್ಲೂಕಿನ ಜಂಬುನಾಥಹಳ್ಳಿ ವ್ಯಕ್ತಿಯ ವಿರುದ್ಧ ಒಸಿ, ಮಟ್ಕಾ ಸೇರಿ ವಿವಿಧ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಕ್ಕೆ 24 ಪ್ರಕರಣಗಳು ದಾಖಲಾಗಿವೆ. ಆರೋಪಿಯನ್ನು ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ. ತುರ್ವಿಹಾಳ ಪೊಲೀಸ್ ಠಾಣೆ ವ್ಯಾಪ್ತಿಯ ಕಣ್ಣೂರು ಗ್ರಾಮದ ನಿವಾಸಿಯ ವಿರುದ್ಧ ಒಸಿ, ಮಟ್ಕಾ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಭಾಗಿಯಾಗಿದ್ದಕ್ಕೆ 26 ಪ್ರಕರಣಗಳು ಧ ಲಾಗಿವೆ. ಆರೋಪಿಯನ್ನು ಬಾಗಲಕೋಟೆ ಜಿಲ್ಲೆಯ ಗಿ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ರಾಯಚೂರು ತಾಲ್ಲೂಕಿನ ಕಾಕನಗೇರಿ ಗ್ರಾಮದ ನಿವಾಸಿಯ ವಿರುದ್ಧ ಒಸಿ ಹಾಗೂ ಮಟ್ಕಾ ಸೇರಿದಂತೆ 8 ಪ್ರಕರಣಗಳು ದಾಖಲಾಗಿದ್ದು, ಆರೋಪಿಯನ್ನು ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಚಿಂತಾಕಿ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ. ಜಿಲ್ಲೆಯಲ್ಲಿ ಒಸಿ, ಮಟ್ಕಾ, ಸೇಂದಿ, ಗಾಂಜಾ ಸೇರಿದಂತೆ ಇತರೆ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ ತಿಳಿಸಿದ್ದಾರೆ.

## ಒಳಮೀಸಲಾತಿ ಗೊಂದಲ ಬಗೆಹರಿಸಿ ನೇಮಕಾತಿ ನಡೆಸದಿದ್ದರೆ ರಕ್ತದಲ್ಲಿ ಪತ್ರ: ರಾಜ್ಯ ಸರ್ಕಾರಕ್ಕೆ ಪ್ರಶಾಂತ್ ಪಿ ಎಚ್ಚರಿಕೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ರಾಜ್ಯದಲ್ಲಿ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಬೃಹತ್ ಉದ್ಯೋಗ ನೇಮಕಾತಿಗಳ ಗೊಂದಲವನ್ನು ತಕ್ಷಣವೇ ಬಗೆಹರಿಸದಿದ್ದರೆ, ಉದ್ಯೋಗಾಕಾಂಕ್ಷಿಗಳು ತಮ್ಮ ರಕ್ತದ ಮೂಲಕ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಉಗ್ರ ಪ್ರತಿಭಟನೆ ನಡೆಸಲಿದ್ದಾರೆ ಎಂದು ಪ್ರಶಾಂತ್ ಪಿ ಅವರು ರಾಜ್ಯ ಸರ್ಕಾರಕ್ಕೆ ಕಡಕ್ ಎಚ್ಚರಿಕೆ ನೀಡಿದ್ದಾರೆ.**

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 8000 ಪೊಲೀಸ್ ಪೇದೆ, 600 ಪಿಎಸ್ಐ (PSI), 500 ಗ್ರಾಮ ಆಡಳಿತ ಅಧಿಕಾರಿ (VAO) ಹಾಗೂ 15,000 ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಸುದೀರ್ಘ ಕಾಲದಿಂದ ನನೆಗುದಿಗೆ ಬಿದ್ದಿದೆ. ಪರಿಶಿಷ್ಟ



ಜಾತಿ (SC) ಒಳಮೀಸಲಾತಿ ಜಾರಿ ಹಾಗೂ 400–ಪಾಯಿಂಟ್ ರೋಸ್ಟರ್ ವ್ಯವಸ್ಥೆಯ ಮರುಹಂಚಿಕೆಯ ನೆಪದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (KEA) ಮತ್ತು ಕೆಪಿಎಸ್‌ಸಿ (KPSC) ಅಧಿಸೂಚನೆ ಹೊರಡಿಸಲು ವಿಳಂಬ ಮಾಡುತ್ತಿರುವುದನ್ನು ಪ್ರಶಾಂತ್ ಪಿ ತೀವ್ರವಾಗಿ ಖಂಡಿಸಿದ್ದಾರೆ.ಪ್ರಶಾಂತ್ ಪಿ ಅವರ ಆಕ್ರೋಶ ಮತ್ತು ಎಚ್ಚರಿಕೆ:"ಒಳಮೀಸಲಾತಿ ಜಾರಿಯಾಗಿದೆ ಮತ್ತು ರೋಸ್ಟರ್ ಅಂತಿಮಗೊಂಡಿದೆ ಎಂದು ಸರ್ಕಾರ ಹೇಳುತ್ತಿದ್ದರೂ ಅನುಷ್ಠಾನದಲ್ಲಿ ತಾರತಮ್ಯ ಮುಂದುವರಿದಿದೆ. ಆಡಳಿತಾತ್ಮಕ ಗೊಂದಲ ಹಾಗೂ ಕಾನೂನು ಸವಾಲುಗಳ ನೆಪ ಹೇಳಿ ಲಕ್ಷಾಂತರ ನಿರುದ್ಯೋಗಿ ಯುವಕರ ಭವಿಷ್ಯದ ಜೊತೆ ಆಟವಾಡಲಾಗುತ್ತಿದೆ.

**ಬೇಡಿಕೆಗಳು:ಕೆಇಎ (KEA) ಒಂದು ವಾರದೊಳಗೆ ಸ್ಪಷ್ಟ ನೇಮಕಾತಿ ಅಧಿಸೂಚನೆ ಹೊರಡಿಸಬೇಕು.ರೋಸ್ಟರ್ ಮತ್ತು ಒಳಮೀಸಲಾತಿ ಗೊಂದಲಗಳಿಗೆ ತಕ್ಷಣವೇ ಪೂರ್ಣವಿರಾಮ ಇಡಬೇಕು.ವಿಳಂಬದಿಂದಾಗಿ ವಯೋಮಿತಿ ಮೀರಿದ ಅಭ್ಯರ್ಥಿಗಳಿಗೆ ಕನಿಷ್ಠ 3 ವರ್ಷಗಳ ವಯೋಮಿತಿ ಸಡಿಲಿಕೆ ನೀಡಬೇಕು.**

ಕೇವಲ ಒಂದು ವಾರದ ಒಳಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಧಿಕೃತ ನೇಮಕಾತಿ ಅಧಿಸೂಚನೆಯನ್ನು ಹೊರಡಿಸಬೇಕು" ಎಂದು ಅವರು ಆಗ್ರಹಿಸಿದ್ದಾರೆ. ಒಂದು ವೇಳೆ ಸರ್ಕಾರ ಈ ಗೊಂದಲಗಳನ್ನು ತಕ್ಷಣ ನಿವಾರಿಸಿ ಪ್ರಕ್ರಿಯೆಗೆ ಚಾಲನೆ ನೀಡದಿದ್ದರೆ, ರಾಜ್ಯದ ಎಲ್ಲಾ ಜಿಲ್ಲೆಗಳ ಸಾವಿರಾರು ಅಭ್ಯರ್ಥಿಗಳು ತಮ್ಮ ಸ್ವಂತ ರಕ್ತದ ಮೂಲಕ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುವ ಚಳವಳಿ ಹಮ್ಮಿಕೊಳ್ಳಲಿದ್ದಾರೆ. ತದನಂತರ ಉಂಟಾಗುವ ಯಾವುದೇ ಕಾನೂನು ಸುವ್ಯವಸ್ಥೆಯ ಧಕ್ಕೆಗೆ ರಾಜ್ಯ ಸರ್ಕಾರವೇ ನೇರ ಹೊಣೆಯಾಗಲಿದೆ ಎಂದು ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕದ ಪ್ರಶಾಂತ್ ಪಿ ಎಚ್ಚರಿಸಿದ್ದಾರೆ.

# "ನಿರ್ಮಾಣವಾಗಿ ಮೂರೇ ತಿಂಗಳಲ್ಲಿ ಹದಗೆಟ್ಟ ರಸ್ತೆ: ಸಾರ್ವಜನಿಕರ ಕಿಡಿ"



ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಮಸ್ಕಿ ಕ್ರಾಸ್‌ನಿಂದ ಮಿಲ್‌ರೆಗೆ ಇತ್ತೀಚೆಗೆ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಅದರ ಬೆನ್ನಲ್ಲೇ ದುರಸ್ತಿ ಕಾರ್ಯ ಆರಂಭಿಸಲಾಗಿದೆ. ಕಾಮಗಾರಿ ಮುಗಿದ ಕೇವಲ ಮೂರೇ ತಿಂಗಳಲ್ಲಿ ಸಂಪೂರ್ಣ ಹದಗೆಟ್ಟಿದ್ದು, ಡಾಂಬರು ಕಿತ್ತು ಹೋಗಿ ಕಳಪೆ ಕಾಮಗಾರಿ ಅನಾವರಣವಾಗಿದ್ದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. 90 ಲಕ್ಷ ರುಪಾಯಿ ವೆಚ್ಚದಲ್ಲಿ ನಿರ್ಮಾಣವಾದ ಈ ರಸ್ತೆಯಲ್ಲಿ ಹಲವು ಕಡೆ ಡಾಂಬರು ಕಿತ್ತು ಹೋಗಿ**



**ಕಳಪೆ ಕಾಮಗಾರಿಯ ಅನಾವರಣವಾಗಿದೆ.**

ಮಸ್ಕಿ ಕ್ರಾಸ್‌ನಿಂದ ಮಿಲ್‌ವರೆಗಿನ 1 ಕಿ.ಮೀ ಉದ್ದದ ಹಾಗೂ 5.5 ಮೀಟರ್ ಅಗಲದ ಡಾಂಬರೀಕರಣ ರಸ್ತೆ ನಿರ್ಮಾಣವಾಗಿ ಇನ್ನು ಮೂರು ತಿಂಗಳು ಕಳೆದಿಲ್ಲ. ಅಷ್ಟರಲ್ಲೇ ರಸ್ತೆ ಬದಿ ಡಾಂಬರು ಕಿತ್ತು ಹೋಗಿರುವುದು ಕಾಮಗಾರಿಯ ಗುಣಮಟ್ಟವನ್ನು ತೋ–ರಿಸುತ್ತದೆ. ಈಗ ತೇಪೆ ಹಚ್ಚುವ ಕೆಲಸ ಮಾಡುವ ಮೂಲಕ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಕಾಮಗಾರಿಯ ಗುಣಮಟ್ಟ ಮುಚ್ಚಿ ಹಾಕಲು ಯತ್ನಿಸುತ್ತಿದ್ದಾರೆ. ಲಕ್ಷಾಂತರ ರುಪಾಯಿ ವೆಚ್ಚದ ರಸ್ತೆ ಒಂದೇ ಮಳೆಗೆ ಕಿತ್ತು ಹೋಗುತ್ತಿರುವುದು ಹಲವು ಅನುಮಾನ ಮೂಡಿಸಿದೆ.

ಕೇವಲ ತೇಪೆ ಹಚ್ಚುವ ಕೆಲಸ ಮಾಡದೆ, ರಸ್ತೆಯನ್ನು ವೈಜ್ಞಾನಿಕವಾಗಿ ದುರಸ್ತಿಗೊಳಿಸಿ ಗುಣಮಟ್ಟದ ಕಾಮಗಾರಿ ನಡೆಸಬೇಕು ಎಂದು ಭೀಮ್ ಆರ್ಮಿ ಸಂಘದ ಹೋಬಳಿ ಘಟಕದ ಅಧ್ಯಕ್ಷ ಅಜಪ್ಪ ಬುಳ್ಳಾಪುರ ಒತ್ತಾಯಿಸಿದರು. ರಸ್ತೆ ಕಾಮಗಾರಿ ಕಳಪೆಯಾಗಿಲ್ಲ. ಇತ್ತೀಚೆಗೆ ಸು–ರಿದ ಮಳೆಯ ನೀರು ರಸ್ತೆಯ ಮೇಲೆ ನಿಂತಿ–ದ್ದರಿಂದ ಕೆಲವು ಕಡೆ ಸಮಸ್ಯೆ ಉಂಟಾಗಿದೆ. ರಸ್ತೆಗೆ ಒಂದು ವರ್ಷದ ನಿರ್ವಹಣಾ ಅವಧಿ ಇರುವುದರಿಂದ, ಗುತ್ತಿಗೆದಾರರ ಮೂಲಕವೇ ಈಗ ಮರು ದುರಸ್ತಿ ಮಾಡಿಸಿ ಸರಿಪಡಿಸಲಾಗುತ್ತಿದೆ ಎಂದು ಪಿಡಬ್ಲ್ಯೂಡಿ ಜೆ.ಇ. ವೀರಭದ್ರ ಗೌಡ ತಿಳಿಸಿದರು.

# ರಾಯಚೂರು ಜಿಲ್ಲೆಯಲ್ಲಿ ವೈನ್ ಶಾಪ್‌ಗಳಿಗೆ ಕಡಿವಾಣ ಹಾಕುವಂತೆ ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಮ್ಮ ಕರ್ನಾಟಕ ಸೇನೆ ರಾಯಚೂರು ಘಟಕದ ವತಿಯಿಂದ ಕರ್ನಾಟಕದ ಮುಖ್ಯಮಂತ್ರಿಗಳಿಗೆ, ಜಿಲ್ಲಾಧಿಕಾ–ರಿಗಳ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು. ರಾಯಚೂರು ಜಿಲ್ಲೆಯಲ್ಲಿ ಎಲ್ಲೆಂದರಲ್ಲಿ ವೈನ್ ಶಾಪ್‌ಗಳು ತೆರೆಯಲ್ಪಟ್ಟಿದ್ದು, ಶಾಲೆಗಳು ಹಾಗೂ ದೇವಸ್ಥಾನಗಳ ಸಮೀಪದಲ್ಲೇ 100 ಮೀಟರ್ ಅಂತರ ನಿಯಮ ಉಲ್ಲಂಘಿಸಿ ಮದ್ಯ ಮಾರಾಟ ನಡೆಯುತ್ತಿದೆ ಎಂದು ಸಂಘಟನೆಯ ಮುಖಂಡರು ಆರೋಪಿಸಿದರು.**




ಹೋಟೆಲ್, ದಾಬಾ ಹಾಗೂ ಗ್ರಾಮೀಣ ಪ್ರದೇಶಗಳ ಸಣ್ಣಪುಟ್ಟ ಅಂಗಡಿಗಳಲ್ಲಿಯೂ ಅನಧಿಕೃತವಾಗಿ ಮದ್ಯ ಮಾರಾಟ ನಡೆಯುತ್ತಿದ್ದು, ಇದಕ್ಕೆ ತಕ್ಷಣ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ವಿಶೇಷವಾಗಿ ರಾಯಚೂರು ನಗರದಲ್ಲಿರುವ ವೀರಭದ್ರೇಶ್ವರ ದೇವಸ್ಥಾನ ಹಾಗೂ ಚಂದ್ರಮೌಳೇಶ್ವರ ದೇವಸ್ಥಾನಗಳ ಸಮೀಪ ಅಕ್ಷಯ್ ಬಾರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಪೋಲಮ್ಮ ಗುಡಿಯ ಎದುರು ಮಾತಾ ವೈನ್ ಶಾಪ್ ಇರುವುದಾಗಿ ದೂ–ರಿನಲ್ಲಿ ಉಲ್ಲೇಖಿಸಲಾಗಿದೆ. ದೇವಸ್ಥಾನ ಹಾಗೂ ಶಾಲೆಗಳ ಸಮೀಪದಲ್ಲಿರುವ ವೈನ್ ಶಾಪ್‌ಗಳನ್ನು ಕೂಡಲೇ ಸ್ಥಳಾಂತರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಗ್ರಾಮೀಣ ಭಾಗಗಳಲ್ಲಿ ಡಬ್ಬ ಅಂಗಡಿಗಳು ಸೇರಿದಂತೆ ಅನೇಕ ಕಡೆ ಅನಧಿಕೃತ ಮದ್ಯ ಮಾರಾಟ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಬಕಾರಿ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾ–ರಿಗಳು ಮಧ್ಯಪ್ರವೇಶಿಸಿ ಕ್ರಮ ಕೈಗೊಳ್ಳಬೇಕು ಎಂದು ನಮ್ಮ ಕರ್ನಾಟಕ ಸೇನೆ ಜಿಲ್ಲಾಧ್ಯಕ್ಷರಾದ ಕೊಂಡಪ್ಪ ಕೆ. ಅವರು ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಭೀಮನಗೌಡ ಎಂ. ಪಾಟೀಲ್, ಜಿಲ್ಲಾ ಉಪಾಧ್ಯಕ್ಷ ಮಹೇಶ್ ಪಾಟೀಲ್, ಪದಾಧಿಕಾರಿಗಳಾದ ವಿರೇಶ್ ಜಲಗಾರ್, ನವೀನ್, ನಾಗರಾಜ್ ದೊರೆ, ರಘುನಾಥ್, ನರಸಿಂಹಲು ಯಾದವ್, ಆನಂದ್, ಎಂ. ಗಾಂಧಿ, ದೇವೇಂದ್ರಪ್ಪ ತಾತ, ಶಿವನಗೌಡ ಪಮರ್ತಿ, ಹುಲಗಪ್ಪ ನಾಯಕ್, ಹನುಮೇಶ್ ನಾಯಕ್, ಶಿವರಾಜ್ ನಾಯಕ್, ಚಂದ್ರು ನಾಯಕ್ ಹಾಗೂ ಕೃಷ್ಣ ಭೋವಿ ಚೆನ್ನಪ್ಪ ಕಡಮಲ್ ಉಪಸ್ಥಿತರಿದ್ದರು.

# ವಿವಾಹಿತ ಪ್ರಿಯತಮೆಯನ್ನೇ ಕೊಂದ ಪಾತಕಿ ಶವವನ್ನು ನದಿಗೆ ಎಸೆಯಲು ಯತ್ನ ಸಾರ್ವಜನಿಕರ ಜಾಗೃತಿಯಿಂದ ಆರೋಪಿ ಪೊಲೀಸರ ವಶಕ್ಕೆ

ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ತಾನು ಬೇರೊಂದು ಮದುವೆಯಾಗಲು ಅಡ್ಡಿಯಾಗುತ್ತಿದ್ದಾಳೆ ಎಂಬ ಕಾರಣಕ್ಕೆ ಯುವಕನೊಬ್ಬ ತನ್ನ ವಿವಾಹಿತ ಪ್ರಿಯತಮೆಯನ್ನೇ ಬರ್ಬರವಾಗಿ ಹತ್ಯೆಗೈದು, ಬಳಿಕ ಶವವನ್ನು ಸುಮಾರು ಎಂಟು ಕಿಲೋಮೀಟ–ರ್ ದೂರ ಬೈಕ್‌ನಲ್ಲಿ ಸಾಗಿಸಿಕೊಂಡು ಹೋಗಿ ನದಿಗೆ ಎಸೆಯಲು ಯತ್ನಿಸಿದ ಅಮಾನುಷ ಘಟನೆ ತಂಗಡಗಿ ಸಮೀಪದ ಸೇತುವೆ ಬಳಿ ಮಧ್ಯರಾತ್ರಿ ನಡೆದಿದ್ದು, ಸಾರ್ವಜನಿಕರ ಎಚ್ಚರಿಕೆಯಿಂದ ಪ್ರಕರಣ ಸಿನಿಮೀಯ ರೀತಿಯಲ್ಲಿ ಬೆಳಕಿಗೆ ಬಂದಿದೆ.**

ಮೃತ ಮಹಿಳೆಯನ್ನು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಯರಟಗಲ್ ಗ್ರಾಮದ ಗಂಗವ್ವ ಸುನೀಲ ತ್ಯಾಪಿ (25) ಎಂದು ಗುರುತಿಸಲಾಗಿದ್ದು, ಆರೋಪಿ ತೇರದಾಳ ಮೂಲದವನಾಗಿದ್ದು ಸದ್ಯ ಹುನಗುಂದ ತಾಲೂಕಿನ ಮರೋಳ ಗ್ರಾಮದಲ್ಲಿ ವಾಸವಾಗಿದ್ದ ಸಮ್ಮೇದ



ವಿಜಯ ಸಾಬಣ್ಣವರ ಎಂದು ತಿಳಿದುಬಂದಿದೆ. ಪೊಲೀಸ್ ಮೂಲಗಳ ಪ್ರಕಾರ, ಆರೋಪಿ ಸಮ್ಮೇದ ಮತ್ತು ಗಂಗವ್ವ ಶಾಲಾ ದಿನಗಳಿಂದಲೇ ಪರಿಚಿತರಾಗಿದ್ದು, ಬಳಿಕ ಅವರ ಸ್ನೇಹ ಪ್ರೇಮ ಸಂಬಂಧಕ್ಕೆ ತಿರುಗಿತ್ತು. ಆದರೆ ಈ ಸಂಬಂಧ ಕುಟುಂಬಸ್ಥರಿಗೆ ತಿಳಿಯದೇ ಗಂಗವ್ವಳಿಗೆ ಸವದತ್ತಿ ತಾಲೂಕಿನ ಯುವಕನೊಂದಿಗೆ ಮದುವೆ ಮಾಡಿಕೊಡಲಾಗಿತ್ತು. ಮದುವೆಯಾದ ಬಳಿಕ ಗಂಡನೊಂದಿಗೆ ಹೊಂದಾಣಿಕೆ ಆಗದ ಹಿನ್ನೆಲೆ ಗಂಗವ್ವ ಆಗಾಗ ತವರು ಮನೆಗೆ ಬರುತ್ತಿದ್ದಳು ಎನ್ನಲಾಗಿದೆ.




ಈ ಮಧ್ಯೆಯೂ ಗಂಗವ್ವ ಮತ್ತು ಸಮ್ಮೇದರ ನಡುವಿನ ಸಂಪರ್ಕ ಮುಂದುವರಿದಿತ್ತು. ಕಳೆದ ಕೆಲ ದಿನಗಳ ಹಿಂದೆ ಗಂಗವ್ವ ತನ್ನ ಮನೆಯವರಿಗೆ ತಿಳಿಸದೇ ಮರೋಳ ಗ್ರಾಮದ ಜಮೀನಿಗೆ ಬಂದಿದ್ದಳು. ಮಗಳನ್ನು ಹುಡುಕಿದ ಕುಟುಂಬಸ್ಥರು ಸವದತ್ತಿ ಪೊಲೀಸ್ ಠಾಣೆಯಲ್ಲಿ ಕಾಣೆಯಾದ ಪ್ರಕರಣವನ್ನೂ ದಾಖಲಿಸಿದ್ದರು ಎಂದು ತಿಳಿದುಬಂದಿದೆ. ಇನ್ನೊಂದೆಡೆ ಆರೋಪಿ ಸಮ್ಮೇದ ಮತ್ತೊಬ್ಬ ಯುವತಿಯನ್ನು ಮದುವೆಯಾಗಲು ಸಿದ್ಧತೆ ನಡೆಸಿದ್ದನು. ಈ ವಿಷಯ ತಿಳಿದ ಗಂಗವ್ವ ನಿನ್ನ ಮದುವೆಗೆ ತಕರಾರು ಮಾಡುತ್ತೇನೆ, ಬೇರೆ ಮದುವೆಯಾಗಲು ಬಿಡುವುದಿಲ್ಲ, ಎಂದು ಎಚ್ಚರಿಕೆ ನೀಡಿದ್ದಾಳೆ ಎನ್ನಲಾಗಿದೆ.

ಇದರಿಂದ ಆಕ್ರೋಶಗೊಂಡ ಆರೋಪಿ, ಗಂಗವ್ವಳನ್ನು ತನ್ನ ದಾರಿಯಿಂದ ಶಾಶ್ವತವಾಗಿ ದೂರ ಮಾಡಲು ಸಂಚು ರೂಪಿಸಿದ್ದಾನೆ ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಮೇ 13ರಂದು ರಾತ್ರಿ ಸುಮಾರು 8 ಗಂಟೆ ಸುಮಾರಿಗೆ ಮರೋಳ ಗ್ರಾಮದ ಜಮೀನಿನಲ್ಲಿ ಗಂಗವ್ವಳೊಂದಿಗೆ ಜಗಳವಾಡಿದ ಆರೋಪಿ, ಆಕೆಯ ಮೇಲೆ ತೀವ್ರ ಹಲ್ಲೆ ನಡೆಸಿ ಕೊಲೆ ಮಾಡಿದ್ದಾನೆ ಎಂದು ಪೊಲೀಸರು ಶಂಕಿಸಿದ್ದಾರೆ. ಬಳಿಕ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಮೃತದೇಹವನ್ನು ಬೈಕ್ ಮೇಲೆ ಹಾಕಿಕೊಂಡು ತಂಗಡಗಿ ಗ್ರಾಮದ ಸೇತುವೆ ಬಳಿ ತೆರಳಿದ್ದಾನೆ. ಸೇತುವೆ ಮೇಲಿಂದ ಶವವನ್ನು ನದಿಗೆ ಎಸೆಯಲು ಯತ್ನಿಸುತ್ತಿದ್ದ ವೇಳೆ ಅಲ್ಲಿಂದ ತೆರಳುತ್ತಿದ್ದ ಸಾರ್ವಜನಿಕರಿಗೆ ಅನುಮಾನ ಬಂದು ಆತನತ್ತ ಧಾವಿಸಿದ್ದಾರೆ.

ಜನರು ಕೂಗಾಡುತ್ತಾ ಬರುತ್ತಿರುವುದನ್ನು ಕಂಡ ಆರೋಪಿ, ಶವ ಹಾಗೂ ಬೈಕ್ ಅನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಲು ಯತ್ನಿಸಿದ್ದಾನೆ. ಆದರೆ ಸಾರ್ವಜನಿಕರು ಬೆನ್ನಟ್ಟಿ ಹಿಡಿದ ಪರಿಣಾಮ ಆತ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಸಿಕ್ಕಿಬಿದ್ದಿದ್ದು, ಬಳಿಕ ಪೊಲೀಸರಿಗೆ ಒಪ್ಪಿಸಲಾಗಿದೆ. ಘಟನಾ ಸ್ಥಳಕ್ಕೆ ಸಿಪಿಐ ಮೊಹಮ್ಮದ ಫಸಿಯುದ್ದೀನ್ ಹಾಗೂ ಪಿಎಸ್ಐ ಸಂಜಯ ತಿಪರೆಡ್ಡಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದ್ದು, ಮೃತಳ ತಾಯಿ ನೀಡಿದ ದೂರಿನ ಆಧಾರದ ಮೇಲೆ ಆರೋಪಿಯ ವಿರುದ್ಧ ಕೊಲೆ ಸೇರಿದಂತೆ ವಿವಿಧ ಕಲಂಗಳಡಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ನೇಮಕಾತಿ ಪ್ರಕಟಣೆ

ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (GESCOM) 2026–27ನೇ ಸಾಲಿಗೆ ಅಪ್ರೆಂಟಿಸ್ (Apprentice) ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಿದೆ.ಪ್ರಮುಖ ವಿವರಗಳು:ಹುದ್ದೆಯ ಹೆಸರು: ಅಪ್ರೆಂಟಿಸ್ (Engineering Degree/Diploma holders)ಒಟ್ಟು ಹುದ್ದೆಗಳು: 275ಅಧಿಸೂಚನೆ ದಿನಾಂಕ: 12 ಮೇ 2026ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 05 ಜೂನ್ 2026 (ಸಂಜೆ 5 ಗಂಟೆಯವರೆಗೆ)ಅರ್ಜಿ ಸಲ್ಲಿಸುವ ವಿಧಾನ: ಆಫ್‌ಲೈನ್ (Offline) ಅಧಿಕೃತ ವೆಬ್‌ಸೈಟ್: gescom.karnataka.gov.in

## ಸಾರಿಗೆ ಸಿಬ್ಬಂದಿ ಆಕಾಶ ನೇಣಿಗೆ ಶರಣು

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರ: ಪಟ್ಟಣದ ನಗರೇಶ್ವರ ದೇವಸ್ಥಾನದ ಹತ್ತಿರವಿರುವ ಮನೆಯೊಂದರಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಮಸ್ಕಿ ಡಿಪೋದ ಜೂನಿಯರ ಅಸಿಸ್ಟೆಂಟ್ ಆಗಿ ಕಾರ್ಯ ನಿರ್ವಹಿಸುತಿದ್ದ ಆಕಾಶ ದೇವೆಂದ್ರಪ್ಪ ಶೆಟ್ಟಿ (34) ಮಧ್ಯರಾತ್ರಿ ಮದ್ಯದ ಅಮಲಿನಲ್ಲಿ ಮನೆ ಫ್ಯಾನಿಗೆ ಲುಂಗಿ ಕಟ್ಟಿ ಆತ್ಮ ಹತ್ಯೆಗೆ ಶರಣಾಗಿದ್ದಾನೆ.**



ಆತನ ಪತ್ನಿ ಸೌಮ್ಯ ನೀಡಿದ ದೂರಿನ ಮೇರೆಗೆ ಲಿಂಗಸಗೂರ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪತ್ನಿ ಸೌಮ್ಯ ನೀಡಿದ ದೂರಿನ ಮೇಲೆ ಈತ ಮದ್ಯ ವ್ಯಸನಿಯಾಗಿದ್ದು, ಪತ್ನಿಗೆ ಕಿರುಕುಳ ನೀಡುತ್ತಿದ್ದನ್ನು ಮಧ್ಯ ರಾತ್ರಿ ಸಮಯದಲ್ಲಿ ನೇಣಿಗೆ ಶರಣಾಗಿದ್ದಾನೆ. ಆಕಾಶ ಸಾವಿಗೆ ಯಾರು ಜವಾಬ್ದಾರಿಗಳು ಅಲ್ಲ ಎಂದು ದೂರಿನಲ್ಲಿ ತಿಳಿಸಿರುವರು.

## ನಾಳೆ (ಮೇ.17) ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಉಪ ವಿಭಾಗ ವ್ಯಾಪ್ತಿಯ ತಾಳಿಕೋಟಿ ಪಟ್ಟಣ ಮಿಣಜಗಿ, ಶಿವಪುರ, ಹುಲಗಬಾಳ, ನಾಗೂರ, ಮೂಕಿಹಾಳ ಕುಡಿಯುಉಃವ ನೀರಿನ ಘಟಕ, ತುಂಬಗಿ, ತಮದಡ್ಡಿ, ಕೊಣ್ಣೂರ,ಬ.ಸಾಲವಾಡಗಿ, ಮಟಕದೇವನಹಳ್ಳಿ, ಕಾರಗನೂರ, ಬೇಲೂರ, ಮಾಳನೂರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೇ 17 ರವಿವಾರದಂದು ವಿದ್ಯುತ್ ವ್ಯತ್ಯಯ ವುಂಟಾಗಲಿದೆ.**




ತಾಳಿಕೋಟಿ ಕಾರ್ಯ ಪಾಲನೆ ಉಪ ವಿಭಾಗ ವ್ಯಾಪ್ತಿಯಲ್ಲಿನ 110/11ಕೆ.ವಿ. ತಾಳಿಕೋಟಿ ವಿದ್ಯುತ್ ಉಪ ಕೇಂದ್ರದಿಂದ ಹೊರ ಹೋಗುವ ಎಲ್ಲಾ ಫೀಡರಗಳ ಮಾಸಿಕ ನಿರ್ವಹಣಾ ಕಾರ್ಯ ಮಾಡಬೇಕಾಗಿರುವುದರಿಂದ ದಿನಾಂಕ 17.05.2026 ರ ಸಮಯ ಬೆಳಿಗ್ಗೆ 10–00 ಘಂಟೆಯಿಂದ ಸಂಜೆ 5:30 ಘಂಟೆಯವರೆಗೆ ತಾಳಿಕೋಟಿ ಪಟ್ಟಣ, ಮಿಣಜಗಿ,ಬಳಗಾನೂರ, ತಮದಡ್ಡಿ, ಬ.ಸಾಲವಾಡಗಿ, ಮಟಕದೇವನಹಳ್ಳಿ, ಹಿರೂರ, ಕಾರಗನೂರ,ಬೇಲೂರ, ಶಳ್ಳಗಿ, ನಾವದಗಿ, ಲಕ್ಕುಂಡಿ ಗ್ರಾಮಕ್ಕೆ ಮತ್ತು ಮಾಳೂರ ಕುಡಿಯುವ ನೀರಿನ ಘಟಕಕ್ಕೆ ವಿದ್ಯುತ್ ಅಡಚಣೆಯಾಗುತ್ತದೆ. ಆದ್ದರಿಂದ ತಾಳಿಕೋಟಿ ತಾಲೂಕಿನ ಸುತ್ತಮುತ್ತಲಿನ ಗ್ರಾಮಗಳ ಎಲ್ಲಾ ಗ್ರಾಹಕರು ಸಹಕರಿಸಬೇಕೆಂದು ಈ ಮೂಲಕ ಸಹಾಯಕ ಅಭಿಯಂತರರು ಹೆಸ್ಕಾಂರವರು ಪ್ರಕಟಣೆ ಮೂಲಕ ಕೋರಿರುತ್ತಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಮಂತ್ರಾಲಯ ಶ್ರೀಗಳಿಂದ ತೇರಿನ ಮನೆ ಉದ್ಘಾಟನೆ 6000 ಮೂರ್ತಿ ಪ್ರತಿಷ್ಠಾಪನೆ ಮಾಡಿದ ಏಕೈಕ ಸಂತ ಪಂಚಾಕ್ಷರಿ ಶಿವಾಚಾರ್ಯರು ಮಂತ್ರಾಲಯ ಶ್ರೀ

ನೈಜ್ಯ ದೆಸೆ ನ್ಯೂಸ್

**ಸಿರವಾರ: ನಾಡಿನಾದ್ಯಂತ ಸುಮಾರು 6000ಕ್ಕೂ ಹೆಚ್ಚು ಶಿಲೆಗಳ ಪ್ರತಿಷ್ಠಾಪನೆ ಮತ್ತು ಪೂಜೆ ನಡೆಯುತ್ತಿರುವುದು ಡಾ. ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳ ಅಪಾರ ಧಾರ್ಮಿಕ ಸೇವೆಯ ಫಲವಾಗಿದೆ. ಇಂತಹ ಅಪರೂಪದ ಸಂತರನ್ನು ಪಡೆದಿರುವುದು ಭಕ್ತರ ಭಾಗ್ಯ ಎಂದು ಮಂತ್ರಾಲಯದ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದರು ಹೇಳಿದರು.**

ಸಮೀಪದ ಶ್ರೀಕ್ಷೇತ್ರ ನೀಲಗಲ್ ಗಣೇಕಲ್‌ನ ಶ್ರೀ ಶಾಂಭವಿ ಸಂಸ್ಥಾನ ಮಠದಲ್ಲಿ ನಡೆದ ಶ್ರೀ ಪ.ಪೂ. ಷ.ಬ್ರ. ಡಾ. ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳ 76ನೇ ಜನ್ಮವರ್ಧಂತಿ ಹಾಗೂ ನೂತನ ತೇರಿನ ಮನೆ ಉದ್ಘಾಟನಾ ಕಾರ್ಯಕ್ರಮದ ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು, ಶ್ರೀಗಳು ರಾಜ್ಯದಾದ್ಯಂತ ಕಾಲ್ನಡಿಗೆಯಲ್ಲಿ ಸಂಚರಿಸಿ



ಅನೇಕ ದೇವಸ್ಥಾನಗಳಲ್ಲಿ ಮೂರ್ತಿ ಪ್ರತಿಷ್ಠಾಪನೆ ಮತ್ತು ಪ್ರಾಣಪ್ರತಿಷ್ಠಾಪನೆ ನೆರವೇರಿಸಿರುವುದು ಅಪೂರ್ವ ಸೇವೆಯಾಗಿದೆ ಎಂದು ಪ್ರಶಂಸಿಸಿದರು. ಸನಾತನ ಧರ್ಮದ ಉಳಿವು–ಬೆಳವಣಿಗೆಗಾಗಿ ತಮ್ಮ ಸಂಪೂರ್ಣ ಜೀವನವನ್ನೇ ಸಮರ್ಪಿಸಿಕೊಂಡಿರುವ ಮಹಾಸ್ವಾಮಿಗಳು ಸರಳತೆ, ವಿನಯ ಮತ್ತು ಸೇವಾಭಾವದಿಂದ ಭಕ್ತರ ಹೃದಯ ಗೆದ್ದಿದ್ದಾರೆ ಎಂದರು.

ಶ್ರೀಮಠದ ಕಿರಿಯ ಶ್ರೀಗಳಾದ ಪೂಜ್ಯ ಷ.ಬ್ರ. ಅಭಿನವ ರೇಣುಕ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಸಹ ಮಠದ ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ವಿಸ್ತರಿಸುತ್ತಿದ್ದು, ಇಬ್ಬರ ಸೇವೆಯಿಂದ ಮಠದ ಕೀರ್ತಿ ದೇಶದಾದ್ಯಂತ ಹರಡಲಿ ಎಂದು ಹಾರೈಸಿದರು. ಡಾ. ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ಮಾತನಾಡಿ, "ನಾನು ಯಾವುದನ್ನೂ ಸ್ವತಃ ಮಾಡಿಲ್ಲ. ಶ್ರೀ ಶಾಂಭವಿ ದೇವಿಯ ಕೃಪೆಯಿಂದ ನನ್ನ ಮೂಲಕ ಸೇವೆ ನಡೆಯುತ್ತಿದೆ. ಭಕ್ತರ ಆಧ್ಯಾತ್ಮಿಕ ಬೆಳವಣಿಗೆ, ಸಮಾಜದ ಶ್ರೇಯೋಭಿವೃದ್ಧಿ ಮತ್ತು ನಾಡಿನ ಒಳಿತಿಗಾಗಿ ನಮ್ಮ ಸೇವೆ ನಿರಂತರವಾಗಿರುತ್ತದೆ" ಎಂದು ಹೇಳಿದರು. ಕಾರ್ಯಕ್ರಮದ ಅಂಗವಾಗಿ ವಿಶೇಷ ಪೂಜೆಗಳು, ವೇದಘೋಷ, ಭಜನಾ ಕಾರ್ಯಕ್ರಮಗಳು ಮತ್ತು ಗುರು ವಂದನೆ ನಡೆಯಿತು.

ನೂತನ ತೇರಿನ ಮನೆ ಉದ್ಘಾಟನೆಯು ಭಕ್ತರಲ್ಲಿ ಅಪಾರ ಸಂತಸ ಮೂಡಿಸಿತು. ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರು ಶ್ರೀಗಳ ದರ್ಶನ ಪಡೆದು ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಗಟ್ಟೂರಿನ ಬೂದಿಬಸವ ಶಿವಾಚಾರ್ಯರು, ಸೋಮವಾರಪೇಟೆಯ ಅಭಿನವ ರಾಚೋಟಿವೀರ ಶಿವಾಚಾರ್ಯರು, ಮಾನವಿ ಕಲ್ಮಠದ ಡಾ. ವಿರೂಪಾಕ್ಷ ಪಂಡಿತಾರಾಧ್ಯರು, ಸುಲ್ತಾನಪುರದ ಶಂಭುಲಿಂಗ ಶಿವಾಚಾರ್ಯರು, ಮಂಗಳವಾರಪೇಟೆ ಶ್ರೀಗಳು ಸೇರಿದಂತೆ ಅನೇಕ ಮಠಾಧೀಶರು ಹಾಗೂ ಧಾರ್ಮಿಕ ಮುಖಂಡರು ಉಪಸ್ಥಿತರಿದ್ದರು. ನೂತನ ತೇರಿನ ಮನೆ ಉದ್ಘಾಟನಾ ಸಮಾರಂಭದಲ್ಲಿ ಹಿರಿಯ ಮುಖಂಡ ಹಾಗೂ ಉದ್ಯಮಿ ಚುಕ್ಕಿ ಸೂಗಪ್ಪ ಸಾಹುಕಾರ, ವೈ. ಅಮರೇಶಪ್ಪ, ಯುವ ಮುಖಂಡ ರಮೇಶ ದರ್ಶನಕರ್, ಶಿವಶರಣ ಸಾಹುಕಾರ ಅರಕೇರಿ ಸೇರಿದಂತೆ ಸಾವಿರಾರು ಭಕ್ತರು ಭಾಗವಹಿಸಿ ಗುರುಗಳ ಅನುಗ್ರಹ ಆಶೀರ್ವಾದ ಪಡೆದರು.

## ಬಿಸಿಲಿನ ಬೇಗೆ ತಣಿಸಲು ಕರವೇ ಮುಂದು ಕರವೇ ಸ್ವಾಭಿಮಾನಿ ಬಣದಿಂದ ಉಚಿತ ಟೊಪ್ಪಿಗೆ ವಿತರಣೆ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣದ ಅಧ್ಯಕ್ಷ ಮಂಜುನಾಥ ಗಾಣಗೇರ ನೇತೃತ್ವದಲ್ಲಿ ಶುಕ್ರವಾರ ನಗರದ ಬಸ್ ನಿಲ್ದಾಣ, ಎಪಿಎಂಸಿ ಸೇರಿದಂತೆ ವಿವಿಧ ಕಡೆಗಳಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಟೊಪ್ಪಿಗೆಗಳನ್ನು ವಿತರಿಸಲಾಯಿತು.**

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಯ ತಾಲ್ಲೂಕು ಘಟಕದ ಅಧ್ಯಕ್ಷ ಮಂಜುನಾಥ ಗಾಣಗೇರ, "ಕಳೆದ ಹಲವು ದಿನಗಳಿಂದ ಬಿಸಿಲಿನ ತಾಪಮಾನ 40 ಡಿಗ್ರಿಗೂ ಹೆಚ್ಚು ಇದೆ. ಹೀಗಾಗಿ ಕೆಲಸ ಕಾರ್ಯಗಳಿಗಾಗಿ ಸಂಚರಿಸಲು ಸಾರ್ವಜನಿಕರು ಪರಿತಪಿಸುತ್ತಿದ್ದಾರೆ. ಮಧ್ಯಾಹ್ನ 12 ಗಂಟೆ ಸುಮಾರು ಹೊರಗಡೆ



ನಡೆದಾಡುವುದೇ ದುಸ್ತರ ಎನ್ನುವಂತಾಗಿದೆ. ಬಿಸಿಲಿನ ತಾಪದಿಂದ ಸನ್ ಸ್ಟ್ರೋಕ್ ಪ್ರಕರಣಗಳು ಹೆಚ್ಚುತ್ತಿದ್ದು, ಇದನ್ನು ಮನಗಂಡು ಸಾರ್ವಜನಿಕರಿಗೆ ನಮ್ಮ ಸಂಘಟನೆಯ ವತಿಯಿಂದ ಉಚಿತವಾಗಿ ಟೊಪ್ಪಿಗೆಗಳನ್ನು ವಿತರಿಸಲಾಗಿದೆ" ಎಂದು ಹೇಳಿದರು. ಆಟೋ ಚಾಲಕರು, ಬೀದಿ ಬದಿ ವ್ಯಾಪಾರಸ್ಥರು, ಚಾಲಕರು–ನಿರ್ವಾಹಕರು, ಎಪಿಎಂಸಿ ಹಮಾಲರು ಸೇರಿದಂತೆ ಸಾರ್ವಜನಿಕರಿಗೆ ಉಚಿತವಾಗಿ ಟೊಪ್ಪಿಗೆಗಳನ್ನು ವಿತರಿಸಲಾಯಿತು.

ಅತಿಥಿಗಳಾದ ಹಾರೂನ್ ಪಾಷಾ ಜಾಗೀರ್‌ದಾರ, ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದ ಕಾರ್ಯಾಧ್ಯಕ್ಷ ಡಾ.ಚನ್ನಬಸವಸ್ವಾಮಿ ಹಿರೇಮಠ, ವನಸಿರಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಅಮರೇಗೌಡ ಮಲ್ಲಾಪುರ, ಕೆಪಿಸಿಸಿ ಮಹಿಳಾ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ನಾಗವೇಣಿ.ಎಸ್.ಪಾಟೀಲ್, ಕರವೇ ಕನ್ನಡಸೇನೆ ರಾಜ್ಯ ಕಾರ್ಯಾಧ್ಯಕ್ಷ ಉಮೇಶಗೌಡ ಅರಳಹಳ್ಳಿ ಟೊಪ್ಪಿಗೆಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರಾದ ಬೀರಪ್ಪ ಹಾಲಾಪುರ, ಶರಣಬಸವ ನಾಯಕ, ಶ್ರೀಕಾಂತ್ ಜವಳಿ, ಯಲ್ಲಪ್ಪ ಕೋಣದ, ಅಶೋಕ, ಮಲ್ಲಿಕಾರ್ಜುನ ಕುನ್ನಟಗಿ, ಸಿದ್ರಾಮೇಶ ಸುಲ್ತಾನಾಪುರ, ಮಲ್ಲಪ್ಪ ಕುರಿ, ನಿಂಗರಾಜ ವಿರುಪಾಪುರ, ಆದಿ ಹಿರೇಮಠ, ವಿಶ್ವನಾಥ ಕಾವೇರಿ ಹೋಟೆಲ್, ರಾಜು, ಚನ್ನಬಸವಸ್ವಾಮಿ ಹಿರೇಮಠ, ಭಾನು ಸೋಮಲಾಪುರ ಇನ್ನಿತರರಿದ್ದರು.

## ಆರ್.ಎಚ್. ನಂ.1 ಬರ್ಮಾ ಕ್ಯಾಂಪ್: ಅದ್ದೂರಿಯಾಗಿ ಜರುಗಿದ ಆರೋಗ್ಯ ಮಾತೆ ಜಾತ್ರಾ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

**ಬರ್ಮಾ ಕ್ಯಾಂಪ್: ಇಲ್ಲಿನ ಆರ್.ಎಚ್. ನಂಬರ್ ಒನ್ ಗ್ರಾಮದಲ್ಲಿ ನೆಲೆಸಿರುವ ಪರಮ ಪಾವನ ಆರೋಗ್ಯ ಮಾತೆಯ (ಅವರ್ ಲೇಡಿ ಆಫ್ ಗುಡ್ ಹೆಲ್ತ್) ವಾರ್ಷಿಕ ಜಾತ್ರಾ ಮಹೋತ್ಸವವು ಅತ್ಯಂತ ಸಡಗರ–ಸಂಭ್ರಮ ಹಾಗೂ ಭಕ್ತಿಭಾವದಿಂದ ಯಶಸ್ವಿಯಾಗಿ ನೆರವೇರಿತು.**

ಭವ್ಯ ತೇರಿನ ಮೆರವಣಿಗೆ* ಮೇ 14ರಂದು ಸಂಜೆ ಆರೋಗ್ಯ ಮಾತೆಯ ಭವ್ಯವಾಗಿ ಅಲಂಕೃತಗೊಂಡ ತೇರಿನ ಮೆರವಣಿಗೆಗೆ ಚಾಲನೆ ನೀಡಲಾಯಿತು. ಗ್ರಾಮದ ಪ್ರಮುಖ ರಾಜಬೀದಿಗಳಲ್ಲಿ ಸಾರೋಟು, ಮಂಗಳ ವಾದ್ಯಗಳು ಹಾಗೂ ಭಕ್ತರ ಜಯಘೋಷಗಳೊಂದಿಗೆ




ಸಾಗಿದ ತೇರಿನ ಭವ್ಯ ಮೆರವಣಿಗೆಯು ಸಾರ್ವಜನಿಕರ ಕಣ್ಮನ ಸೆಳೆಯಿತು. ಭಕ್ತರು ರಸ್ತೆಯುದ್ದಕ್ಕೂ ತಾಯಿಗೆ ಪೂಜೆ ಸಲ್ಲಿಸಿ ಧನ್ಯತೆ ಅನುಭವಿಸಿದರು. ರಾಜಬೀದಿಗಳಲ್ಲಿ ಸಂಚರಿಸಿದ ತೇರು ತಡರಾತ್ರಿ ಭವ್ಯವಾಗಿ ಆರೋಗ್ಯ ಮಾತೆ ದೇವಾಲಯವನ್ನು ತಲುಪಿತು.

ಮೆರವಣಿಗೆಯ ಪೂರ್ವದಲ್ಲಿ ತಾಯಿಯ ವಿಶೇಷ ಹಬ್ಬದ ಬಲಿಪೂಜೆಯನ್ನು ನೆರವೇರಿಸಲಾಗಿತ್ತು. ದಿವ್ಯ ಬಲಿಪೂಜೆ ಮತ್ತು ಧ್ವಜ ಅವರೋಹಣ* ಮಹೋತ್ಸವದ ಪ್ರಮುಖ ದಿನವಾದ ಮೇ 15ರಂದು ಬೆಳಗ್ಗೆ 10 ಗಂಟೆಗೆ ಹಬ್ಬದ ಪ್ರಯುಕ್ತ ದಿವ್ಯ ಬಲಿಪೂಜೆಯನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ನೂರಾರು ಭಕ್ತಾದಿಗಳು ಈ ಪವಿತ್ರ ಬಲಿಪೂಜೆಯಲ್ಲಿ ಪಾಲ್ಗೊಂಡು ತಾಯಿಯ ಕೃಪೆಗೆ ಪಾತ್ರರಾದರು. ತದನಂತರ ಹಬ್ಬದ ಸಮಾಪ್ತಿಯ ಸಂಕೇತವಾಗಿ ಧ್ವಜವನ್ನು ಇಳಿಸುವ (ಧ್ವಜ ಅವರೋಹಣ) ಕಾರ್ಯಕ್ರಮ ಜರುಗಿತು.

ಮೇಣದಬತ್ತಿ ಹರಕೆ ಸಮರ್ಪಣೆ* ಕ್ಷೇತ್ರದ ಪದ್ಧತಿಯಂತೆ ಭಕ್ತರು ತಮ್ಮ ಮನಕಲ್ಲೂರನ್ನು (ಮನಸ್ಸಿನ ಹರಕೆಗಳನ್ನು) ಈಡೇರಿಸಿದ ತಾಯಿ ಮರಿಯಮ್ಮನವರಿಗೆ ಕೃತಜ್ಞತೆ ಸಲ್ಲಿಸಲು ಮೇಣದಬತ್ತಿಗಳನ್ನು ಬೆಳಗಿ, ತಾಯಿಯ ಪಾದಕ್ಕೆ ಸಮರ್ಪಿಸಿ ಗೌರವ ಸಲ್ಲಿಸಿದರು. ಹರಕೆ ಹೊತ್ತ ನೂರಾರು ಭಕ್ತರು ತಾಯಿಯ ದರ್ಶನ ಪಡೆದು ಪುನೀತರಾದರು. ಒಟ್ಟಾರೆಯಾಗಿ ಆರ್.ಎಚ್. ನಂ.1 ಬರ್ಮಾ ಕ್ಯಾಂಪ್‌ನಲ್ಲಿ ನಡೆದ ಈ ವರ್ಷದ ಆರೋಗ್ಯ ಮಾತೆ ಜಾತ್ರಾ ಮಹೋತ್ಸವವು ಸರ್ವ ಧರ್ಮದವರ ಭಕ್ತಿಯ ಸಂಗಮವಾಗಿ, ಶಾಂತಿ ಹಾಗೂ ಸೌಹಾರ್ದತೆಯಿಂದ ಸಂಪನ್ನಗೊಂಡಿತು....

## ಸಿರುಗುಪ್ಪ: ಜಿಲ್ಲಾ ನಬಾರ್ಡ್ ಅಧಿಕಾರಿ ಯುವರಾಜ್ ಪಶು ವೈದ್ಯಕೀಯ ಆಸ್ಪತ್ರೆಗೆ ಭೇಟಿ ಕಾಮಗಾರಿ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ಪಶು ವೈದ್ಯಕೀಯ ಆಸ್ಪತ್ರೆಗೆ ನಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ಆರ್ ಎಸ್ ಯುವರಾಜ್ ಭೇಟಿ ನೀಡಿ ಆಸ್ಪತ್ರೆ ಕಾಮಗಾರಿ ಪರಿಶೀಲನೆ ನಡೆಸಿದರು ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಆರ್ ಐ ಡಿ ಎಫ್ ಯೋಜನೆ ಅಡಿಯಲ್ಲಿ ಡಿಸೆಂಬರ್ 2024ರಲ್ಲಿ ಅನುಮೋದಿತ 49.96 ಲಕ್ಷ ರೂ, ವೆಚ್ಚದ ಕಟ್ಟಡದ ಕಾಮಗಾರಿ ಗುಣಮಟ್ಟದ ಪರಿಶೀಲಿನೆ ನಡೆಯಿತು.**



ಈ ಸಂದರ್ಭದಲ್ಲಿ ಸಿರುಗುಪ್ಪ ಪಶು ಸಂಗೋಪನ ಇಲಾಖೆಯ ಸಹಾಯಕ ನಿರ್ದೇಶಕರು ಪಶು ವೈದ್ಯಾಧಿಕಾರಿ ಡಾ ಗಂಗಾಧರ ಅವರು ಮಾತನಾಡಿ ಕಟ್ಟಡ ನಿರ್ಮಾಣ ಕಾಮಗಾರಿ ನಿಧಾನವಾಗಿ ಸಾಗುತ್ತಿದೆ ಗುತ್ತಿಗೆದಾರರು ಇಲಾಖೆಯ ಯಾವುದೇ ಮನವಿಗೆ ಸ್ಪಂದಿಸುತ್ತಿಲ್ಲ ಕಟ್ಟಡಕ್ಕಾಗಿ ನೀರಿನ ವ್ಯವಸ್ಥೆ ಕಲ್ಪಿಸಲು ಪ್ರತ್ಯೇಕ ಅನುದಾನ ಇದ್ದರೂ ಇವರಿಗೆ ಕೆಲಸ ಮಾಡಿಲ್ಲ ಎಂದು ಅವರ ಬೇಸರ ವ್ಯಕ್ತಪಡಿಸಿದರು.

ಕಟ್ಟಡ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಯಾವುದೇ ಆಹವಾಲು ಸಲ್ಲಿಸುವಾಗ ದಾಖಲೆ ಹಾಗೂ ಜಿಪಿಎಸ್ ಫೋಟೋಗಳೊಂದಿಗೆ ಕಳುಹಿಸಬೇಕು ಎಂದು ನ ಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರು ಸೂಚಿಸಿದರು ಪಶು ವೈದ್ಯಕೀಯ ಹಿರಿಯ ಪರಿವೀಕ್ಷಕ ಟಿ.ಹುಚೇರಪ್ಪ, ದ್ವಿತೀಯ ಸಹಾಯಕ ಸುರೇಂದ್ರನಾಥ್, ಸಿಬ್ಬಂದಿ ತಿಪ್ಪಮ್ಮ ಇದ್ದರು

ವರದಿ : ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

## ಬಿಸಿಲಿನ ಪ್ರಖರತೆ ಹೆಚ್ಚುತ್ತಿರುವ ಕಾರಣ ಮಧ್ಯಾನ್ಹದ ಅವಧಿಯಲ್ಲಿ ನವಜಾತ ಶಿಶು, ಗರ್ಭಿಣಿ, ಬಾಣಂತಿ, ಸೇರಿದಂತೆ ವಯೋವೃದ್ಧರ ಸುರಕ್ಷತೆಯ ಖಾಳಜಿಗೆ ಆಧ್ಯತೆ ನೀಡಿ: ಡಾ ಸುರೇಂದ್ರಬಾಬು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರಸಕ್ತ ಮೇ ತಿಂಗಳಿನ ಬಿಸಿಲಿನ ಪ್ರಖರತೆ ಹೆಚ್ಚಿರುವ ಕಾರಣ ಮಧ್ಯಾನ್ಹದ ವೇಳೆ ಮನೆಯಿಂದ ಹೊರಗೆ ಹೋಗುವಾಗ ಹತ್ತಿ ಬಟ್ಟೆಗೆ ಆಧ್ಯತೆ ನೀಡಿ ಕುಡಿಯುವ ನೀರು ಸದಾ ಜೊತೆಯಲ್ಲಿ ಇರಲು ಜನತೆ ಕಾಳಜಿ ವಹಿಸಲು, ಅದರಲ್ಲೂ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ವಯೊವೃದ್ಧರಿಗೆ ಹೆಚ್ಚಿನ ಮುತವರ್ಜಿವಹಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ವಿನಂತಿಸಿದರು.**

ಹವಮಾನ ಇಲಾಖೆ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸೂಚನೆಯಂತೆ ಮುಂದಿನ ಕೆಲವು ದಿನ ತಾಪಮಾನವು ಅಧಿಕವಾಗಿರುವ ಕುರಿತು ವರದಿಯಾಗಿರುವ ಹಿನ್ನಲೆ, ಬಿಸಿಲಿನ ಪ್ರಖರತೆ ಹೆಚ್ಚಿರುವ ಮಧ್ಯಾನ್ಹದ 12 ಗಂಟೆಯಿಂದ 4 ಗಂಟೆಯವರೆಗೆ ಹೆಚ್ಚು ಜಾಗರೂಕರಾಗಿದ್ದು ಆದಷ್ಟು ಶುದ್ಧ ನೀರು, ಮಜ್ಜಿಗೆ, ಎಳೆ ನೀರು, ನಿಂಬುಪಾನಕ, ಮುಂತಾದವುಗಳ ಸೇವನೆ ಮಾಡಲು ತಿಳಿಸಿದರು.

ನವಜಾತ ಶಿಶುವಿನ ಕಾಳಜಿ: ಹೆರಿಗೆ ನಂತರ ಬಾಣಂತಿಯರು ನವಜಾತ ಶಿಶುವಿಗೆ ಮೇಲಿಂದ ಮೇಲೆ ಎದೆ ಹಾಲುಣಿಸುವ ಮೂಲಕ ಶಿಶುವಿನಲ್ಲಾಗುವ ನಿರ್ಜಲೀಕರಣ ತಡೆಯಲು ಸಹಕಾರಿಯಾಗುವುದು. ರೋಗ ನಿರೋಧಕ ಶಕ್ತಿ ವೃದ್ದಿಸಲು 12 ಮಾರಕ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಮರೆಯಬಾರದು.

ಗರ್ಭಿಣಿ ಬಾಣಂತಿಯರ ಆರೈಕೆ: ಪ್ರಖರ ಬಿಸಿಲಿನ ಅವಧಿಯಲ್ಲಿ ಆದಷ್ಟು ಮನೆಯ ಹೊರಗೆ ಹೋಗದಂತೆ ಮುತವರ್ಜಿ ವಹಿಸಿ. ಮನೆಯ ಒಳಗೆ ಅಥವಾ ನೆರಳು ಇರುವ ಸ್ಥಳದಲ್ಲಿ ವಿಶ್ರಾಂತಿ ಪಡೆಯಬೇಕಿದೆ. ಆದಷ್ಟು ಮಸಾಲೆಯುಕ್ತ ಪದಾರ್ಥಗಳ ಸೇವನೆ ಕಡಿಮೆ ಇರಲಿ. ವಯೊವೃದ್ಧರು ಹಾಗೂ ದಿರ್ಘಾವಧಿ ಕಾಯಿಲೆಯಿಂದ ಬಳಲುವವರ ಆರೈಕೆ: ಅಧಿಕ ಬಿಸಿಲಿರುವ ಸಮಯದಲ್ಲಿ ಮನೆಯ ಹೊರಗೆ ಹೊಗದಿರಲು ಯೋಚಿಸಿ, ದೈನಂದಿನವಾಗಿ



ತೆಗೆದುಕೊಳ್ಳುವ ಮಾತ್ರೆಗಳನ್ನು ಜೊತೆಯಲ್ಲಿರಿಸಿಕೊಳ್ಳಿ, ದ್ರವ ಆಹಾರ ಹೆಚ್ಚು ಸೇವಿಸಬೇಕು.

ಚಿಕ್ಕ ಮಕ್ಕಳ ಆರೈಕೆಗೆ ಕಾಳಜಿ ಆಟವಾಡುವ ಮಕ್ಕಳು ಬಿಸಿಲಿನಲ್ಲಿ ನಿಲ್ಲಿಸಿರುವ ವಾಹನ ಮುಟ್ಟದಂತೆ ಜಾಗೃತಿ ವಹಿಸಬೇಕು. ಮಕ್ಕಳು ಅಸುರಕ್ಷಿತ ಆಹಾರ, ಪಾನೀಯ ಸೇವಿಸದಂತೆ ನಿಗಾವಹಿಸಿ. ಓಆರ್‌ಎಸ್ ಜೀವಜಲ ಬಳಕೆಗೆ ಆಧ್ಯತೆ ನೀಡಿ ನಿರ್ಜಲಿಕರಿಣದಿಂದ ದೇಹದ ನೀರಿನ ಅಂಶದ ಜೊತೆಗೆ ಲವಣಾಂಶ ಕಡಿಮೆಯಾಗದಂತೆ ಓಆರ್‌ಎಸ್ ಜೀವ ಜಲ ಪೊಟ್ಟಣ ಸದಾ ಮನೆಯಲ್ಲಿರಲಿ. ಒಂದು ಲೀಟರ್ ನೀರಿಗೆ ಪೊಟ್ಟಣದ ಸಂಪೂರ್ಣ ಪುಡಿ ಹಾಕಿ ದ್ರಾವಣ ಸಿದ್ದಪಡಿಸಿ 24 ಗಂಟೆಯೊಳಗೆ ಬಳಸಬೇಕು. ಇದಲ್ಲದೆ ಲಿಂಬೂ ಪಾನಕ, ಎಳೆನೀರು, ಮಜ್ಜಿಗೆ ಕುಡಿಯಬಹುದು. ಆಹಾರದಲ್ಲಿ ಬೇಳೆ ತಿಳಿ ಬಳಸಿ. ಇಗಾಗಲೆ ಮುಂಜಾಗೃತವಾಗಿ ಜಿಲ್ಲಾ ಎನ್‌ಪೋರ್ಸಮೆಂಟ್ ಅಧಿಕಾರಿ ಡಾ ಶಿವಕುಮಾರ ನಾರಾ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿಯನ್ವಯ ಆರೋಗ್ಯ ಇಲಾಖೆ ಸಿಬ್ಬಂದಿಗಳು, ಆಸ್ಪತ್ರೆಯ ಬರುವ ಜನತೆಗೆ ಹಾಗೂ ಬಡಾವಣೆ, ಗ್ರಾಮಗಳಲ್ಲಿ ವ್ಯಾಪಕ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

ವಾಂತಿ ಬೇಧಿ ತಡೆ: ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ–ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ದೀಕರಿಸಿದ ನೀರು ಅಥವಾ ನೀರು ಶುದ್ದೀಕರಣ ಘಟಕದ ನೀರನ್ನು ಕುಡಿಯಲು ಬಳಸಬೇಕು. ಅಲ್ಲದೆ ಊಟದ ಮೊದಲು ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವಿಸಬೇಕು. ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಸುರಕ್ಷಿತ ಆಹಾರ ಮಾತ್ರ ಸೇವಿಸಿ, ಆದಷ್ಟು ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ್ಯತೆ ನೀಡಿರಿ, ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಸೇವಿಸಬಾರದು, ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಬೇಕು. ಇದಕ್ಕಾಗಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ ನೇತೃತ್ವದಲ್ಲಿ ಅಗತ್ಯ ಜಾಗೃತಿ ನೀಡಲಾಗುತ್ತಿದೆ ಎಂದರು. ಅಲ್ಲದೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಮುಂಜಾಗ್ರತಾ ಔಷಧಿಗಳು ಲಭ್ಯವಿದ್ದು, ಯಾವುದೇ ತುರ್ತು ಸಂದರ್ಭದಲ್ಲಿ 108 ಕ್ಕೆ ಕರೆ ಮಾಡಿ ಉಚಿತ ಆಯಂಬ್ಯುಲೆನ್ಸ್ ಸದುಪಯೋಗ ಪಡೆಯಲು ತಿಳಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ರೆಫ್ರಿಜರೇಶನ್ ಮತ್ತು ಏರ್ ಕಂಡೀಷನಿಂಗ್ ಟೆಕ್ನಿಷಿಯನ್

ರೆಫ್ರಿಜರೇಶನ್ ಮತ್ತು ಏರ್ ಕಂಡೀಷನಿಂಗ್ ಟೆಕ್ನಿಷಿಯನ್ (Mechanic RAC) ಐಟಿಐ ಕೋರ್ಸ್ 2 ವರ್ಷಗಳ ಅವಧಿಯ ಎನ್‌ಸಿವಿಟಿ (NCVT) ಮಾನ್ಯತೆ ಪಡೆದ ತಾಂತ್ರಿಕ ಕೋರ್ಸ್ ಆಗಿದೆ. ಇದು ಫ್ರಿಜ್, ಎಸಿ, ಮತ್ತು ಕೂಲಿಂಗ್ ಸಿಸ್ಟಮ್‌ಗಳ ಅಳವಡಿಕೆ, ದುರಸ್ತಿ ಮತ್ತು ನಿರ್ವಹಣೆಯನ್ನು ಕಲಿಸುತ್ತದೆ. 10ನೇ ತರಗತಿ ಪಾಸಾದವರು ಈ ಕೋರ್ಸ್ ಸೇರಬಹುದು. ಕೋರ್ಸ್ ವಿವರಗಳು (Course Highlights)ಕೋರ್ಸ್ ಹೆಸರು: ಮೆಕ್ಯಾನಿಕ್ (ರೆಫ್ರಿಜರೇಶನ್ ಮತ್ತು ಏರ್-ಕಂಡೀಷನರ್)ಅವಧಿ: 2 ವರ್ಷ (4 ಸೆಮಿಸ್ಟರ್‌ಗಳು, ತಲಾ 6 ತಿಂಗಳು).ಅರ್ಹತೆ: 10ನೇ ತರಗತಿ ಉತ್ತೀರ್ಣ (ವಿಜ್ಞಾನ ಮತ್ತು ಗಣಿತದೊಂದಿಗೆ).ಪ್ರಮಾಣೀಕರಣ: ಎನ್‌ಸಿವಿಟಿ (NCVT) ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್ (NTC) – ಇದು ಜಾಗತಿಕ ಮಾನ್ಯತೆ ಹೊಂದಿದೆ.NSQಈ ಲೆವೆಲ್: 5.?? ಪಠ್ಯಕ್ರಮದ ವಿಷಯಗಳು (Syllabus Highlights) ಕೋರ್ಸ್ ಪ್ರಾಯೋಗಿಕ ಜ್ಞಾನಕ್ಕೆ (Trade Practical) ಹೆಚ್ಚು ಒತ್ತು ನೀಡುತ್ತದೆ:ಟ್ರೇಡ್ ಥಿಯರಿ (Trade Theory): ರೆಫ್ರಿಜರೇಶನ್ ಮೂಲ ತತ್ವಗಳು, ಥರ್ಮೋಡೈನಾಮಿಕ್ಸ್, ರೆಫ್ರಿಜರಂಟ್ಸ್, ವಿಂಡೋ ಎಸಿ, ಸ್ಪ್ಲಿಟ್ ಎಸಿ, ಕಾರ್ ಎಸಿ, ಮತ್ತು ಸೆಂಟ್ರಲೈಸ್ಡ್ ಎಸಿ ಸಿಸ್ಟಮ್‌ಗಳು.ಟ್ರೇಡ್ ಪ್ರಾಕ್ಟಿಕಲ್ (Trade Practical): ಲೀಕ್ ಚೆಕ್, ಎಸಿ ಸ್ಥಾಪನೆ (Installation), ಕಂಪ್ರೆಸರ್ ದುರಸ್ತಿ, ಪೈಪಿಂಗ್, ಮತ್ತು ಗ್ಯಾಸ್ ಚಾರ್ಜಿಂಗ್.ಇಂಜಿನಿಯರಿಂಗ್ ಡ್ರಾಯಿಂಗ್ & ವರ್ಕ್‌ಶಾಪ್ ಕ್ಯಾಲ್ಕುಲೇಶನ್: HVAC ಲೇಔಟ್ ಮತ್ತು ಕೂಲಿಂಗ್ ಲೋಡ್ ಲೆಕ್ಕಾಚಾರ. ಪ್ರವೇಶ ಮತ್ತು ಶುಲ್ಕ (Admission & Fees) ಸರ್ಕಾರಿ ಐಟಿಐ: 10,000 – 25,000 (ಅಂದಾಜು).ಖಾಸಗಿ ಐಟಿಐ: ?20,000 – 60,000 (ಅಂದಾಜು).ಕರ್ನಾಟಕದಲ್ಲಿ ಪ್ರಮುಖ ನಗರಗಳು: ಬೆಂಗಳೂರು (Govt ITI Peenya), ಮೈಸೂರು, ಮಂಗಳೂರು, ಉಡುಪಿ, ಶಿವಮೊಗ್ಗ. ಉದ್ಯೋಗಾವಕಾಶಗಳು (Job Roles) ಎಸಿ ಮತ್ತು ಫ್ರಿಜ್ ಸರ್ವಿಸ್ ಟೆಕ್ನಿಷಿಯನ್‌ಊಗಿಂಅ ಮೆಕ್ಯಾನಿಕ್ಕಂಪ್ರೆಸರ್ ಆಪರೇಟರ್ಸ್ವಂತ ದುರಸ್ತಿ ಅಂಗಡಿ (Self-employment)

1ನೇ ಪುಟದಿಂದ....

ಒಟ್ಟಾರೆಯಾಗಿ ಅದರ ಏಳನೇ ಅತಿದೊಡ್ಡ ಹೂಡಿಕೆ ಮೂಲವಾಗಿದೆ. ಯುಎಇ 4.5 ಮಿಲಿಯನ್‌ಗಿಂತಲೂ ಹೆಚ್ಚು ಬಲಿಷ್ಠ ಭಾರತೀಯ ಸಮುದಾಯವನ್ನು ಆಯೋಜಿಸುತ್ತಿರುವುದರಿಂದ, ಅವರ ಕಲ್ಯಾಣವನ್ನು ಚರ್ಚಿಸಲು ಈ ಭೇಟಿಯು ಒಂದು ಅವಕಾಶವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಮ್ಮ ಪ್ರವಾಸದ ಎರಡನೇ ಹಂತದಲ್ಲಿ, ಮೋದಿ ಮೇ 15 ರಿಂದ 17 ರವರೆಗೆ ನೆದರ್ಲ್ಯಾಂಡ್ಸಗೆ ಭೇಟಿ ನೀಡಲಿದ್ದಾರೆ. 2017 ರ ನಂತರ ಇದು ಅವರ ಎರಡನೇ ನೆದರ್ಲ್ಯಾಂಡ್‌ಸ ಪ್ರವಾಸವಾಗಲಿದೆ.ಮೋದಿ ರಾಜ ವಿಲ್ಲೆಮ್-ಅಲೆಕ್ಸಾಂಡರ್ ಮತ್ತು ರಾಣಿ ಮ್ಯಾಕ್ಸಿಮಾ ಅವರನ್ನು ಭೇಟಿ ಮಾಡಲಿದ್ದಾರೆ ಮತ್ತು ಪ್ರಧಾನಿ ರಾಬ್ ಜೆಟ್ಟನ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಮೋದಿ ಅವರ ಭೇಟಿಯು ಬಹುಮುಖ ಪಾಲುದಾರಿಕೆಯನ್ನು ಮತ್ತಷ್ಟು ಆಳಗೊಳಿಸಲು ಮತ್ತು ವಿಸ್ತರಿಸಲು ಅವಕಾಶವನ್ನು ಒದಗಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. 2024-25 ರಲ್ಲಿ ನೆದರ್ಲ್ಯಾಂಡ್ಸ್ 27.8 ಶತಕೋಟಿ ಮೌಲ್ಯದ ದ್ವಿಪಕ್ಷೀಯ ವ್ಯಾಪಾರದೊಂದಿಗೆ ಯುರೋಪ್‌ನಲ್ಲಿ ಭಾರತದ ಅತಿದೊಡ್ಡ ವ್ಯಾಪಾರ ತಾಣಗಳಲ್ಲಿ ಒಂದಾಗಿದೆ. 55.6 ಶತಕೋಟಿ ಸಂಚಿತ ವಿದೇಶಿ ನೇರ ಹೂಡಿಕೆಯೊಂದಿಗೆ ಯುರೋಪಿಯನ್ ರಾಷ್ಟ್ರವು ಭಾರತದ ನಾಲ್ಕನೇ ಅತಿದೊಡ್ಡ ಹೂಡಿಕೆದಾರರಾಗಿದೆ. ಮೋದಿ ಅವರ ಭೇಟಿಯು ರಕ್ಷಣೆ, ಭದ್ರತೆ, ನಾವೀನ್ಯತೆ, ಹಸಿರು ಹೈಡ್ರೋಜನ್, ಅರೆವಾಹಕಗಳು ಮತ್ತು ನೀರಿನ ಮೇಲಿನ ಕಾರ್ಯತಂತ್ರದ ಪಾಲುದಾರಿಕೆ ಸೇರಿದಂತೆ ವೈವಿಧ್ಯಮಯ ವಲಯಗಳನ್ನು ವ್ಯಾಪಿಸಿರುವ ಉನ್ನತ ಮಟ್ಟದ ನಿಶ್ಚಿತಾರ್ಥಗಳು ಮತ್ತು ನಿಕಟ ಸಹಕಾರದ ಆವೇಗದ ಮೇಲೆ ನಿರ್ಮಿಸಲ್ಪಡುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನೆದರ್ಲ್ಯಾಂಡ್ಸ್‌ನಿಂದ, ಪ್ರಧಾನಿಯವರು ಮೇ 17 ರಿಂದ 18 ರವರೆಗೆ ಎರಡು ದಿನಗಳ ಪ್ರವಾಸಕ್ಕಾಗಿ ಸ್ವೀಡಿಷ್ ಪ್ರತಿರೂಪ ಉಲ್ಫ್ ಕ್ರಿಸ್ಟರ್ಸನ್ ಅವರ ಆಹ್ವಾನದ ಮೇರೆಗೆ ಸ್ವೀಡನ್‌ಗೆ ಪ್ರಯಾಣಿಸಲಿದ್ದಾರೆ. ಮೋದಿ ಅವರು 2018 ರಲ್ಲಿ ಮೊದಲ ಬಾರಿಗೆ ನಡೆದ ಭಾರತ-ನಾರ್ಡಿಕ್ ಶೃಂಗಸಭೆಗಾಗಿ ಸ್ವೀಡನ್‌ಗೆ ಭೇಟಿ ನೀಡಿದ್ದರು. 2025 ರಲ್ಲಿ 7.75 ಶತಕೋಟಿ ಡಾಲರ್ ತಲುಪಿದ ದ್ವಿಪಕ್ಷೀಯ ವ್ಯಾಪಾರವನ್ನು ಹೆಚ್ಚಿಸಲು ಸಹಕಾರದ ಹೊಸ ಮಾರ್ಗಗಳನ್ನು ಅನ್ವೇಷಿಸಲು ಮತ್ತು ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ವ್ಯಾಪ್ತಿಯನ್ನು ಪರಿಶೀಲಿಸಲು ಪ್ರಧಾನಿ ಕ್ರಿಸ್ಟರ್ಸನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆಗಳನ್ನು ನಡೆಸಲು ನಿರ್ಧರಿಸಲಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಬಳಗಾನೂರಿನ ಆಂಜನೇಯ್ಯ ದೇವಸ್ಥಾನದಲ್ಲಿ ಅಪರೂಪದ ಬಲಮುರಿ ಕಲ್ಲಿನ ಗಣಪ ಕಳವು, ಭಕ್ತರಲ್ಲಿ ಹೆಚ್ಚಿದ ಆತಂಕ, ಆರೋಪಿಗಳ ಬಂಧನಕ್ಕೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಪಟ್ಟಣದ ಐತಿಹಾಸಿಕ ಬಂಧು ಶತಪುರೇಶ ಆಂಜನೇಯ್ಯ ದೇವಸ್ಥಾನದ ಆವರಣದಲ್ಲಿದ್ದ ಅಪರೂಪದ ನಿಂತ ಬಲಮುರಿ ಕಲ್ಲಿನ ವಿಶೇಷ ಗಣೇಶನ ಮೂರ್ತಿಯನ್ನು ದುಷ್ಕರ್ಮಿಗಳು ಕಳವು ಮಾಡಿಕೊಂಡು ಹೋಗಿರುವ ಘಟನೆ ಭಕ್ತರಲ್ಲಿ ಆತಂಕ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ.**

ದೇವಸ್ಥಾನದ ಕಾರ್ಯದರ್ಶಿಯಾಗಿರುವ ಶ್ರೀ ಅಮರೇಶ ಹಾಗೂ ಗ್ರಾಮ ಆಡಳಿತಾಧಿಕಾರಿಗಳು ಈ ಕುರಿತು ಬಳಗಾನೂರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿದ್ದು, ಪ್ರತಿದಿನ ಪೂಜಾ ಕಾರ್ಯಗಳು ಯತಾಪ್ರಕಾರ ನಡೆಯುತ್ತಿದ್ದವು.ಶುಕ್ರವಾರ ಬೆಳಿಗ್ಗೆ ಸುಮಾರು 6 ಗಂಟೆಗೆ ದೇವಸ್ಥಾನದ ಅರ್ಚಕರಾದ ರಂಗನಾಥ ಪೂಜಾರಿ ಅವರು ಕಾರ್ಯದರ್ಶಿಗಳಿಗೆ ಕರೆ ಮಾಡಿ, ದೇವಸ್ಥಾನದ ನೈರುತ್ಯ ದಿಕ್ಕಿನಲ್ಲಿದ್ದ ನಿಂತ ಬಲಸೊಂಡೆ ಕಲ್ಲಿನ ವಿಶೇಷ ಗಣಪ ಮೂರ್ತಿ ಕಾಣೆಯಾಗಿರುವ ಬಗ್ಗೆ ಮಾಹಿತಿ ನೀಡಿದ್ದಾರೆ.

ತಕ್ಷಣ ಸ್ಥಳಕ್ಕೆ ಭೇಟಿ ನೀಡಿದ



ದೇವಸ್ಥಾನ ಸಮಿತಿ ಸದಸ್ಯರು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದಾಗ ಮೂರ್ತಿಯನ್ನು ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ದೇವಸ್ಥಾನದ ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿದ ವೇಳೆ, ಅವು ಕಳೆದ ಮೇ 5ರಿಂದಲೇ ಕಾರ್ಯನಿರ್ವಹಿಸದೇ ಇರುವ ಸಂಗತಿ ಪತ್ತೆಯಾಗಿದೆ. ಇದರಿಂದ ಕಳ್ಳರು ಪೂರ್ವಯೋಜಿತವಾಗಿ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.ಮೇ 14ರ ರಾತ್ರಿ 11 ಗಂಟೆಯಿಂದ ಮೇ 15ರ ಬೆಳಿಗ್ಗೆ 5 ಗಂಟೆಯೊಳಗಿನ ಅವಧಿಯಲ್ಲಿ ಈ ಕಳವು ನಡೆದಿರಬಹುದು ಎಂದು ಅಂದಾಜಿಸಲಾಗಿದೆ. ದೇವಸ್ಥಾನದ ಆಸುಪಾಸಿನ ಭಕ್ತರು ಇದು ರಾತ್ರಿ ಒಂದು ಗಂಟೆಯಿಂದ ನಡೆದಿರಬಹುದೆಂಬ ಅನುಮಾನವಿದೆ,

ಏಕೆಂದರೆ ಆಗ ನಾಯಿಗಳು ವಿಪರೀತವಾಗಿ ಬೊಗಳುತ್ತಿದ್ದವು ಆಗ ನಮಗೆ ಯಾಕಿಷ್ಟು ನಾಯಿಗಳು ಬೊಗಳುತ್ತಿವೆ ಎಂಬ ಅನುಮಾನ ಬಂತು ಆದರೆ ಸಾಕಷ್ಟು ಧಣಿದಿದ್ದರಿಂದ ಹೊರಬರಲಾಗಲಿಲ್ಲ. ಬೆಳಿಗ್ಗೆ ನೋಡಿದರೆ ಬಲಮುರಿ ಗಣೇಶನ ವಿಗ್ರಹ ಕಳುವಾಗಿದೆ ಎಂಬುದು ಗೊತ್ತಾಯಿತು. ಇದು ಪೂರ್ವ ನಿಯೋಜಿತ ಕೃತ್ಯ ಒಂದೆ ದಿನದಲ್ಲಿ ಏಕಾ ಏಕಿ ಮಾಡಲು ಸಾಧ್ಯವಿಲ್ಲ. ಸುಮಾರು ಐದಾರು ಜನ ಸೇರಿ ಈ ಕೃತ್ಯವನ್ನು ಎಸಗಿರಬಹುದು ಎಂದು ಅನುಮಾನ ವ್ಯಕ್ತಪಡಿಸಿದರು. ಇನ್ನು ಅರ್ಚಕರುಗಳಾದ ರಂಗಣ್ಣ ಪೂಜಾರಿ,ವೆಂಕಟೇಶ ಪೂಜಾರಿಯವರು ನಮ್ಮ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ ಇದನ್ನು ನಿಧಿಗಳ್ಳರು,ಅಥವಾ ಮಕ್ಕಳಾಗದವರು,ಅಥವಾ ಮಂತ್ರವಾದಿಗಳ ಹೇಳಿಕೆಯ ಮೇರೆಗೆ ಪೂಜೆ ಮಾಡಲು ಕಳುವು ಮಾಡಿರಬಹುದೆಂಬ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ.

ಜೊತೆಗೆ ಸ್ಥಳೀಯರು ಈ ದೇವಸ್ಥಾನದಲ್ಲಿ ನಿತ್ಯ ರಾತ್ರಿ ಕಾವಲುಗಾರರನ್ನು ಡ್ಯೂಟಿಗೆ ಹಾಕಿದರೆ ಮುಂದಿನ ದಿನಗಳಲ್ಲಿ ಈ ರೀತಿಯ ಪ್ರಕರಣಗಳು ಮರುಕಳಿಸುವುದಿಲ್ಲ. ದೇವಸ್ಥಾನದಲ್ಲಿ ಭಕ್ತರು ಕಾಣಿಕೆಯಾಗಿ ನೀಡಿದ ಬೆಲೆಬಾಳುವ ಬೆಳ್ಳಿಯ ತೊಟ್ಟಿಲು,ಬೆಳ್ಳಿಯ ಕವಚ ಮುಂತಾದ ವಸ್ತುಗಳು ಇರುವುದರಿಂದ ರಕ್ಷಣೆಯ ಅವಶ್ಯಕತೆಯಿದೆ. ಈ ದೇವಸ್ಥಸನ ಮುಜುರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವುದರಿಂದ ತಹಸಿಲ್ದಾರರು ಮುತುವರ್ಜಿ ವಹಿಸಿ ರಾತ್ರಿ ಕಾವಲುಗಾರರನ್ನು ನೇಮಿಸಬೇಕು ಎಂದು ಆಗ್ರಹಿಸಿದರು. ಮಹಾಮಹಿಮ ಆಂಜನೇಯ್ಯನ ದೇವಸ್ಥಾನದ ಆವರಣದಲ್ಲಿಯ ಗಣೇಶನ ಮೂರ್ತಿಯೇ ಕಳುವಾಗುತ್ತದೆಂದರೆ ನಮ್ಮ ಗತಿಯೇನು ಎಂದು ಭಕ್ತರು ಚಿಂತಾಕ್ರಾಂತರಾಗಿದ್ದಾರೆ. ಗ್ರಾಮ ಲೆಕ್ಕಿಗರು ನೀಡಿದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿ ಅಪರೂಪದ ಗಣಪ ಮೂರ್ತಿಯನ್ನು ಶೀಘ್ರ ಪತ್ತೆಹಚ್ಚಿ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಭಕ್ತರು ಹಾಗೂ ಗ್ರಾಮಸ್ಥರು ಆಗ್ರಹಿಸಿದ್ದಾರೆ. ವರದಿ, ಸುರೇಶ ಬಳಗಾನೂರು.

# ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಕೈಗೊಳ್ಳಿ



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲ್ಲೂಕು ದಲಿತ ವಿದ್ಯಾರ್ಥಿ ಪರಿಷತ್ ವತಿಯಿಂದ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿರೋಧಿಸಿ ತಹಶಿಲ್ದಾರರಿಗೆ ಮನವಿ ಸಲ್ಲಿಸಿ ಮಾತನಾಡಿದ ಜಿಲ್ಲಾ ಸಂಚಾಲಕರಾದ ಮೌನೇಶ ಜಾಲವಾಡಗಿ ಅವರು ದೇಶದಾದ್ಯಂತ ಲಕ್ಷಾಂತರ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ವೈದ್ಯಕೀಯ ಕನಸಿನ ಭವಿಷ್ಯವನ್ನು ನಿರ್ಧರಿಸುವ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆಯು ಸೋರಿಕೆಯಾಗಿರುವುದು ಖಂಡನೀಯ.**

ಈ ಕ್ರಮದಿಂದಾಗಿ ಇದೇ ತಿಂಗಳ ಮೇ 03 ರಂದು ನಡೆದ ಪರೀಕ್ಷೆಯನ್ನು ರದ್ದುಗೊಳಿಸಲಾಗಿದ್ದು, ಹಗಲಿರುಳು ಕಷ್ಟಪಟ್ಟು ಓದಿದ ಪ್ರಾಮಾಣಿಕ ವಿದ್ಯಾರ್ಥಿಗಳು ಇಂದು ಮಾನಸಿಕ ಆತಂಕ ಮತ್ತು ಅನಿಶ್ಚಿತತೆಗೆ ಒಳಗಾಗಿದ್ದಾರೆ. ಈ ಪರೀಕ್ಷಾ ಹಗರಣವು ಕೇವಲ ಒಂದು ಪರೀಕ್ಷೆಯ ವೈಫಲ್ಯವಲ್ಲ, ಬದಲಾಗಿ ದೇಶದ ಶಿಕ್ಷಣ ವ್ಯವಸ್ಥೆಯ ಮೇಲಿನ ಒಡೆತ. ಆದ್ದರಿಂದ ನಮ್ಮ ಬೇಡಿಕೆಗಳಾದ ಸಂಪೂರ್ಣ ತನಿಖೆ, ಕಠಿಣ ಶಿಕ್ಷೆ, ಸುಧಾರಿತ ಭದ್ರತೆ, ವಿದ್ಯಾರ್ಥಿಗಳ ರಕ್ಷಣೆ ಇವುಗಳನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷರಾದ ಮೌನೇಶ ತುಗ್ಗಲದಿನ್ನಿ, ಸಿಂಧನೂರು ತಾಲೂಕ ಅಧ್ಯಕ್ಷರಾದ ದುರ್ಗೇಶ ಕಲಮಂಗಿ, ಶರಣಬಸವ ಕಲಮಂಗಿ, ಮರಿಸ್ವಾಮಿ ಹಂಚಿನಾಳ, ಶರಣಬಸವ, ವೀರಭದ್ರ, ಹನುಮಂತ,ರಾಜು ಹಾಗೂ ಇನ್ನಿತರರು ಭಾಗವಹಿಸಿದ್ದರು.

# ತಂದೆಯಿಂದಲೇ ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ಕಿರುಕುಳ-ಪೋಕ್ಸೋ ಪ್ರಕರಣ ದಾಖಲು, ಆರೋಪಿಗಳ ಬಂಧನ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ವಾರ್ಡ್ ನಂ. 4 ರ (ಜನತಾ ಕಲೋನಿ) ಯ ನಿವಾಸಿ ಅಮರೇಶ್ ಜಾತಿ ನಾಯಕ ಈತನು ತನ್ನ ಮಗಳು 7 ನೇ ತರಗತಿ ಓದುತ್ತಿದ್ದಾಗ ಋತುಮತಿಯಾಗಿದ್ದು, ಆಕೆಯು ಮನೆಯಲಿ ಒಬ್ಬಳೆ ಇದ್ದಾಗ ತಂದೆ ಅಮರೇಶ್ ಮೈ ಕೈ ಮುಟ್ಟಿ ಕೆಟ್ಟದಾಗಿ ವರ್ತನೆ ಮಾಡುತ್ತಿದ್ದು ಮತ್ತು ಈ ವಿಷಯವನ್ನು ಯಾರಿಗೂ ಹೇಳದಂತೆ ಬೆದರಿಸುತ್ತಿದ್ದನು,**

ನಂತರ ಬಾಲಕಿ 9 ನೇ ತರಗತಿ ಓದುತ್ತಿದ್ದಾಗ ಅಮರೇಶ್ ಈತನು ತನ್ನ ಮನೆಯಲಿ ಮಗಳಿಗೆ ಒಂದು ಸಲ ಮೈ, ಕೈ ಮುಟ್ಟಿ ಆಕೆಯೊಂದಿಗೆ ಬಲವಂತವಾಗಿ





ಅತ್ಯಾಚಾರ ಮಾಡಿದ್ದಲದೇ ಈ ವಿಷಯವನ್ನು ಯಾರಿಗಾದರೂ ಹೇಳಿದರೆ ನಿನ್ನ ತಾಯಿಗೂ ಟಾರ್ಚರ್ ಮಾಡ್ತೀನಿ, ನಿನ್ನನ್ನು ಸಾಯಿಸ್ತಿನಿ ಅಂತಾ ಬೆದರಿಸಿದ್ದು, ಆಗಿನಿಂದಲು ನಿರಂತರವಾಗಿ ಮನೆಯಲ್ಲಿ ಒಬ್ಬಳೆ ಇದ್ದಾಗ ಬಲವಂತವಾಗಿ ಅತ್ಯಾಚಾರ ಮಾಡುತ್ತಾ ಬಂದಿರುತ್ತಾನೆ, ಅಲ್ಲದೇ ಕಳೆದ ವರ್ಷ ಆರೋಪಿ ಅಮರೇಶ್ ಈತನ ಗೆಳೆಯನಾದ ಆರೋಪಿ ಸೀನು ಈತನನ್ನು ಎರಡು ಸಲ ಮನೆಗೆ ಕರೆದುಕೊಂಡು ಬಂದು ಆತನೊಂದಿಗೆ ಮಲಗಬೇಕು ಎಂದು ಬೆದರಿಸಿದ್ದು, ಆರೋಪಿ ಸೀನು ಬಾಲಕಿಯೊಂದಿಗೆ ಎರಡು ಸಲ ಬಲವಂತವಾಗಿ ಅತ್ಯಾಚಾರ ಮಾಡಿರುತ್ತಾನೆ.

ನಂತರ ಫೆಬ್ರುವರಿ ತಿಂಗಳಲ್ಲಿ ಆರೋಪಿ ಅಮರೇಶ್ ಬಾಲಕಿಯೊಂದಿಗೆ ದೈಹಿಕ ಅತ್ಯಾಚಾರ ಮಾಡಲು ಪ್ರಾರಂಭಿಸಿದ್ದು, ಅಲ್ಲದೇ ಕೊನೆಯದಾಗಿ ದಿನಾಂಕ 16.04.2026 ರಂದು ಸಂಜೆ 5.00 ಗಂಟೆ ಸುಮಾರಿಗೆ ಮನೆಯಲ್ಲಿ ಯಾರು ಇಲ್ಲದೇ ಇರುವುದನ್ನು ನೋಡಿ ಬಾಲಕಿಯೊಂದಿಗೆ ಬಲವಂತವಾಗಿ ಅತ್ಯಾಚಾರ ಮಾಡಿದು, ಆರೋಪಿ ಸೀನು ಬಾಲಕಿಯು ಪರಿಶಿಷ್ಟ ಜಾತಿಗೆ ಸೇರಿದ ಅಪ್ರಾಪ್ತ ವಯಸ್ಸಿನವ ಳೆಂದು ತಿಳಿದಿದ್ದು ಬಾಲಕಿಂಯೊಂದಿಗೆ ಬಲವಂತವಾಗಿ ಅತ್ಯಾಚಾರ ಮಾಡಿದ್ದೂ ಈ ವಿಷಯ ಬಾಲಕಿ ತಾಯಿಯ ಬಳಿ ತಿಳಿಸಿದ್ದು ಬಾಲಕಿಯ ತಾಯಿಯು ತನ್ನ ಮಗಳ ಭವಿಸ್ಯದ ದೃಷ್ಟಿಯಿಂದ ಭಯಗೊಂಡು ಮನೆಯಲ್ಲಿ ಹಿರಿಯರ ಜೊತೆ ಮಾತನಾಡಿ ವಿಚಾರ ಮಾಡಿಕೊಂಡು ತಡವಾಗಿ ದೂರು ನೀಡಿರುತ್ತಾರೆ ಆ ದೂರಿನ ಆದರದ ಮೇಲೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿ ಪೋಕ್ಸೋ ಪ್ರಕರಣ ದಾಖಲಿಸಿ ನ್ಯಾಯಾಲಯದ ಬಂದನಕ್ಕೆ ನೀಡಿದ್ದಾರೆಂದು ತಿಳಿದು ಬಂದಿದೆ.

# ಗುಡದನಾಳ ಗ್ರಾಮದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಗ್ರಾಮಸ್ಥರಿಂದ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಲಿಂಗಸಗೂರು ತಾಲ್ಲೂಕಿನ ಹೊನ್ನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಗುಡ್ಡದನಾಳ ಗ್ರಾಮದಲ್ಲಿ ಬಹುವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯದೇ ಹಾಗೇ ಉಳಿದಿದ್ದು ಗುಡ್ಡದ ನಾಳ ಗ್ರಾಮಕ್ಕೆ ನೀರು ಪೂರೈಸುವಂತೆ ಹಲವಾರು ಭಾರಿ ಎಲ್ಲಾ ಅಧಿಕಾರಿಗಳಿಗೆ ಹಾಗೂ ಶಾಸಕರಿಗೆ ಪ್ರತಿ ವರ್ಷವು ಮನವಿ ಪತ್ರಗಳನ್ನು ನೀಡುತ್ತಾ ಬಂದರು.**

ಸದರಿ ಗ್ರಾಮದ ನೀರಿನ ಸಮಸ್ಯೆ ಬಗೆಹರಿಸಲು ಯಾರು ಗಮನಹರಿಸುತ್ತಿಲ್ಲ ವೆಂದು ಗುಡ್ಡದನಾಳ ಗ್ರಾಮಸ್ಥರು ಕಾರ್ಯನಿರ್ವಾಹಕ



ಅಧಿಕಾರಿ ಉಮೇಶ್ ರವರಿಗೆ ಮನವಿಯನ್ನು ಸಲ್ಲಿಸಿ ಮಾತನಾಡಿದ ಗ್ರಾಮಸ್ಥರು . ಈಗ ಬೆಸಿಗೆ ಕಾಲವಿದ್ದು ಗ್ರಾಮದಲ್ಲಿ ನೀರಿನ ದಾಹ ಹೆಚ್ಚಾಗಿದ್ದು ಇಲ್ಲಿನ ಜನರು ದಿನ ನಿತ್ಯವು ನೀರಿಗಾಗಿ ಪರದಾಡುವಂತಾಗಿದೆ ಹಾಗೂ ಗ್ರಾಮದಲ್ಲಿನ ಜನರಿಗೆ ಹಾಗೂ ಯುವಕ/ಯುವತಿಯರಿಗೆ ಕೆರೆಗಳಿಗೆ ಹಾಗೂ ಹೊಲಗಳಲ್ಲಿನ ನೀರು ತರುವುದೇ ಒಂದು ಉದ್ಯೋಗವಾಗಿದೆ,

ನೀರಿನ ಸಮಸ್ಯೆ ಬಗ್ಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಅಧ್ಯಕ್ಷರಿಗೆ ಅದು ಎಷ್ಟೋ ಭಾರಿ ಮೌಖಿಕವಾಗಿ ಹಾಗೂ ಲಿಖಿತವಾಗಿ ದಿನಾಲು ಮನವಿ ಮಾಡಿಕೊಳ್ಳುತ್ತಾ ಬಂದರು ಸಮಸ್ಯೆಗೆ ಪ್ರತಿಕ್ರಿಯೆ ನೀಡುತ್ತಿಲ್ಲ , ಗುಡದನಾಳ ಗ್ರಾಮದ ನೀರಿನ ಸಮಸ್ಯೆ ಬಗೆಹರಿಸಿ ಗ್ರಾಮದ ಸಾರ್ವಜನಿಕ ನಳಗಳಿಗೆ ನೀರುಹರಿಸ ಬೇಕೆಂದರು. ಈ ಸಂದರ್ಭದಲ್ಲಿ ಅಮರೇಶ್ ಕಾಗೇರಿ, ಶಿವಾನಂದ್ ದೇವಿಕೇರಿ, ಅಮರಯ್ಯ , ಗುಂದಪ್ಪ ದ್ಯಾಪುರ, ದೇವಪ್ಪ ಮಜ್ಜಿಗಿ, ಸಿದ್ದಯ್ಯ, ಮಹಾಂತೇಶ್ ,ಶಿವಕುಮಾರ್ ಸ್ವಾಮಿ, ಪ್ರದೀಪ್, ಬಸವರಾಜ್, ಅಮರೇಶ್ , ರಮೇಶ್ ಸೇರಿದಂತೆ ಗ್ರಾಮಸ್ಥರು ಇದ್ದರು.

# ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಕೇಂದ್ರ ಸಚಿವರ ರಾಜೀನಾಮೆಗೆ ಶ್ಯಾಮೀದ್ ಗುಂಜಳ್ಳಿ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಬಸವೇಶ್ವರ ವೃತ್ತದ ಮುಂಭಾಗ ಯುವ ಕಾಂಗ್ರೆಸ್ ಶ್ಯಾಮೀದ್ ಗುಂಜಳ್ಳಿ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ತಪ್ಪಿತಸ್ಥರ ವಿರುದ್ದ ಕೂಡಲೇ ಕಾನೂನು ಕ್ರಮ ಕೈಗೊಳ್ಳುವಂತೆ ಪ್ರತಿಭಟನೆ ನಡೆಸಿದರು.**

ಯುವ ಕಾಂಗ್ರೆಸ್ ಅಧ್ಯಕ್ಷ ಶ್ಯಾಮೀದ್ ಗುಂಜಳ್ಳಿ ಮಾತನಾಡಿ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ ನೇತೃತ್ವದಲ್ಲಿ ರಾಜ್ಯಾದ್ಯಂತ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಪ್ರತಿಭಟನೆ ಮಾಡಲಾಗುತ್ತಿದೆ ಕೇಂದ್ರದಲ್ಲಿ




ನರೇಂದ್ರ ಮೋದಿ ಸರ್ಕಾರವು ಲಕ್ಷಾಂತರ ವಿದ್ಯಾರ್ಥಿಗಳ ಜೊತೆ ಚೆಲ್ಲಾಟ ವಾಡುತ್ತಿದ್ದು ದೇಶದಲ್ಲಿ ಹಲವಾರು ಬಾರಿ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು ವಿದ್ಯಾರ್ಥಿಗಳಿಗೆ ಇದರಿಂದಾಗಿ ಬಹಳ ಅನಾನುಕೂಲಗಳಾಗಿವೆ ಈ ಕೂಡಲೇ ಪ್ರಧಾನಿ ಮೋದಿ ಹಾಗೂ ಕೇಂದ್ರ ಸರ್ಕಾರದ ಶಿಕ್ಷಣ ಸಚಿವರು ರಾಜಿನಾಮೆ ನೀಡಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತೀವ್ರವಾಗಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನೀಟ್ ಪರೀಕ್ಷೆಗೆ ವಿದ್ಯಾರ್ಥಿಗಳು ಎರಡು ವರ್ಷಗಳ ಕಾಲ ತಯಾರಿ ಮಾಡಿಕೊಂಡಿದ್ದಾರೆ ಪದೇಪದೇ ನೀಟ್ ಪತ್ರಿಕೆ ಸೋರಿಕೆ ಯಾಗುವುದರಿಂದ ವಿದ್ಯಾರ್ಥಿಗಳು ಬಹಳಷ್ಟು ನೋವಿನಲ್ಲಿ ಇದ್ದಾರೆ ಇದಕ್ಕೆ ಕಾರಣವಾಗಿರುವ ಕೇಂದ್ರದ ಮೋದಿ ಸರ್ಕಾರವು ಇಂತಹ ಸಮಸ್ಯೆಯ ವಿರುದ್ಧ ಧ್ವನಿಯಾಗಬೇಕು ಕೂಡಲೇ ಈ ವ್ಯವಸ್ಥೆಯನ್ನು ಸರಿಪಡಿಸಬೇಕು ಇಲ್ಲದಿದ್ದರೆ ದೆಹಲಿಯ ಸಂಸತ್ತು ಭವನದ ಮುಂದೆ ದೇಶಾದ್ಯಂತ ಇರುವ ಯುವ ಕಾಂಗ್ರೆಸ್ ಘಟಕಗಳು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದರು.

ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಾ. ನಾಗವೇಣಿ ಪಾಟೀಲ್, ಜಿಲ್ಲಾ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಮೌನೇಶ್ ಜಾಲವಾಡಿಗೆ, ಯುವ ಕಾಂಗ್ರೆಸ್ಸಿನ ಕಾರ್ಯಕರ್ತರಾದ ಮಾಳಿಂಗರಾಯ ಕಡುಬುರು, ಪ್ರಭುಗೌಡ ತಲೆಖಾನ್, ಶಿವಕುಮಾರ್ ಶ್ರೀನಿವಾಸ್‌ಕ್ಯಾಂಪ್, ರಮೇಶ ನಾಯಕ, ಮಂಜು ನಾಯಕ ಕುರುಕುಂದ, ದುರ್ಗೇಶ್ ಕಲ್ಮಂಗಿ, ಮೌನೇಶ ತೂಗುಲದಿನ್ನಿ, ಉಮೇಶ, ಸದ್ದಾಂ ಪರಾಪೂರ, ಬಸನಗೌಡ, ಶೆಕ್ಷಾವಲಿ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕದ ಅಧ್ಯಕ್ಷರು, ಸದಸ್ಯರು ಹಾಗೂ ವಿದ್ಯಾರ್ಥಿಗಳಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.